SEON ASHRAMA TRUST (R.)
BELTHANGADY TQ.
D.K.,
KAR. INDIA
H.O. GANDIBAGILU, NERIA

SEON 10
ಸಿಯೋನ ವಿಶೇಷಾಂಕ

ಉಚಿತ ಪ್ರತಿ

£ÀªÀß PÀtÂÚUÀ¼À°è vÀÄA¨Á ¤ÃjvÀÄÛ!
£Á£ÀÄ eÉÆÃgÁV £ÀUÀ¯ÁgÀA©ü¹zÉ,
£ÀUÀÄ«¤AzÁVAiÉÄÃ £ÀªÀß
PÀtÂÚUÀ¼À°è ¤ÃgÀÄ vÀÄA©zÉ JAzÉ!
AiÀiÁjUÁzÀgÀÆ UÉÆvÁÛ¢ÃvÉÃ £ÀªÀß
£ÉÆÃ«£À D¼À?

One Act of Beneficence ... One Act of real usefulness.. Is worth all the abstact sentiment in the world.

THE GENESIS

Often times, our society has a tendency to cast out its 'lesser' mortals... to isolate them- mentally, emotionally, even physically to ensure the idea of a pseudo perfect creation. A body might have been broken, the soul crushed yet in the shower of true dedication and care, possibilities are bound to sprout... to unearth such a possibility is a divine quest, the lord's directive. Seon Ashram, a residential and rehabilitative center for the mentally ill is dedicated to such a quest.Based in the serene backdrop of Mangalore, Seon Ashram was founded by Mr. U.C. Paulose in the year 1999 with an express intention to serve the impoverished and emotionally oppressed masses of society. Today, the ashram is home to the mentally ill, aged destitute, widows, orphans and needy children, physically challenged and sexually abused…all cared for and provided with shelter, food, clothing, medical care and other such. Most importantly however, the ashram provides them with understanding companionship and a chance to make a mark in the very society that views them as secondary. A voyage of wonder needs many willing hands....herein is an appeal, make an effort to understand those not as sure as you.

Our Vision"To raise the quality of life of the mentally and physically challenged, aged and depressed people, creating an environment conducive to their physical, mental and spiritual growth in a holistic manner, to enable them as far as possible to become self reliant and their integration within the existing social structure"

Objectives

- To identify, enroll and rehabilitate mentally challenged destitute individuals.
- To provide minimum basic needs such as food, shelter and clothing to the inmates.
- To provide health care and close follow up of the inmates and help out in their regular activities.
- To establish a vocational training centre for the people those who have recovered.
- To develop community awareness and participation towards the care of the disadvantaged group.
- To provide education for a better tomorrow for the needy children.
- To collaborate with other like minded institutions, NGOs and individuals to attain our common goals.

Long Term Plans: To expand the existing facility to accommodate 500 psychiatric patients.To expand the existing educational institution (Little Flower English Medium School, Ranganpalke, Karkala) till bachelors degree.Help the orphans to settle down in life with proper facilities.

Activities:

Care and Treatment of the ill and their rehabilitation

The Trust provides the basic needs, care and treatment of mentally ill and mentally challenged destitute. Conducts recreational programmes and exposure. Involves the inmates in the daily activities of the centre and provides them skill training programmes.

Care of the Aged Destitute

The Trust takes care of the aged destitutes. The Ashram is a resident of 65 plus aged women and men

Provision of education to poor children.

The Trust has taken over the management of Little Flower English Medium school in Kanajar, Udupi District and school going children from the Ashram have been shifted to that place, where schooling and boarding arrangements along with basic school infrastructure has been made available by Ashram. School has strength of around 210 students.



Community Development

The Trust provides financial assistance for the marriage of girls born into very poor families. Free medical aid is provided to the rural poor. The trust supports the economically weaker sections of society by society by providing financial assistance to repair houses that have been damaged by heavy rains or landslides. The Trust is having Self help Groups in villages, which help the families to reduce the financial risk. The Trust also distributes books, umbrellas, uniform and school fees to the poor children.

Provision of training experience to medical and paramedical students.

The Trust is a centre for the practical training and exposure to Nursing, Psychology and Social work students.

Celebrating the National and State Festivals

Trust celebrates for its inmates all the state and national events such as World Disabled day, Independence day, old age day, organization day. This is being practiced to keep the patience happy and busy, to nourish their physical and mental health.

Awards & Recognition...

Seon Ashram’s efforts have been acknowledged by the grass root level to the top rung far and wide.

2007 - Shield and cash award by Kannada Sangha, Beharin
2007 - Cash award and honour by Catholic Konkani Rakhan Sanchalan Chikmangalore
2006 – Honoured as Anatha Bandhu by Namma Nadu TV Channel
2006 - Kerala State 2nd Kannada Sammelana Award was accorded him for his work
2005 - Hind Rattan Award by NRI Welfare Society of India 2005 - Trophy and cash award by Kuwait based website www.daaiz.com
2004 - Honored for his social work by Hon. District Commissioner Aravind Srivastav & Ms. Gertrude Veigas Deputy Director, Women & Welfare
Dept. (M’lore) 2003 – Shield and cash award on world Disabled day by Chief minister of Karnataka
2003 - Prashamsa Patra and cash award on Independence day by Governer of Karnataka
2003 - Honoured by Rotary Club Mangalore
2003 - Shield and Cash award by Jana Dani, Mandya
2003 - Honoured by ICYM Udupi and Thotathady
2003 - Honoured by Chair of Christianity, Mangalore University
2003 - Best Social Service award by the Dakshina Kannada Rajyostava Samithi
2002 - Honoured as Best Social worker by Pattanga Fortnightly, Mangalore
2001 - Honoured by Kannada Sahitya Parishat Mangalore
2000 - Lions Club, Bantakal has honored him by according him a “Phalapushpa” and a cash award

Also, Mr. Paulose’s efforts have regularly featured on regional TV channels such as Kairali TV, Chandana TV, Namma Naadu and several Newspapers and magazines.

Hind Rattan Award

Independence Day Award

Director’s message

Greetings to all, and thanks for your interest in the Seon Ashram Trust (R) and its paramount cause.

People with mental disabilities have always been seen as inferior and subjective to our pity. Maybe I subscribed to this view until; during the course of my travel I happened to see a mentally challenged individual who was busy looking for food in a smelly, maggot infested sewer. The sight of this fellow human being sharing this enforced condition with the dogs of the street made me questioning my own purpose. I knew that I must do something, how and what were later considerations. After much thought, the idea of an Ashram that served the lowest downtrodden populace of our society was conceived. And later much trials and efforts the dream saw concrete reality. On the 22nd of March 1999, the Seon Ashram Trust (R) was dedicated to the cause of identifying, enrolling and rehabilitating mentally challenged and emotionally pained individuals. Starting with a single patient, the movement today supports a multitude of impoverished and emotionally oppressed individuals…mentally ill, aged destitute, widows, orphans and needy children, physically challenged and sexually abused victims. No distinction is made on religious, moral or economic grounds. Here you will find people of all age groups- from a 3 ½ month old baby to a 100 year old.What began as an individual effort has now succeeded in being a movement that sees the involvement of more and more concerned hearts, willing to dedicate their time and resources to this selfless cause. The ashram needs about 15 lakh rupees a month to function in a way as to make justice to its high cause, and with little pushes from willing patrons- we have always persevered. The task is high and there is always rooms for more willing hands…consider making a difference.

Any mission, any vision needs willing hands and compassionate interest. I invite you, as a friend, to visit our Ashram…to mingle with the ones who would gladly welcome you and consider a way to be of their assistance. Every ounce of help counts…

Thanks for your patience,………………......

U.C Paulose

You have the power to change lives

We appeal to you to join hands with us to support the cause of the children of God. Seon ashram will be greatly honoured with your generous contribution and co-operation.

- A Child’s Education and Nutrition - Rs2000/- p.m.
- Medicine, food and cloth expenses to a mentally ill, mentally retarded, physically handicapped and aged patients - Rs2000/- p.m.
- Make your special days memorable by sponsoring a meal for our inmates.
- Make any contribution you would like to. It will be received with the greatest gratitude.

Note: Your contribution to Seon Ashram is exempted under 80G of Indian Tax Act.

All Cheques and DDs are to be made in Favour of “**Seon Ashram Trust**” AXIS Bank, Mangalore Branch, Essel Tower, Ground Floor, Bunts Hostel Circle, Mangalore. SB A/c No: 077010100127783

Seon Ashram Trust (R)

Gandibagilu Post, Belthangady -574228, Dakshina Kannada, Karnataka, India.Phone: 08256-235228 /208122,
Mobile: +91 9448011928, 9379921568
Email: seonashram@yahoo.co.in, www.seonashram.com, www.seonashram.org

ದಶಮಾನೋತ್ಸವ ಸಂಭ್ರಮದಲ್ಲಿ ಸಿಯೋನ್ ಆಶ್ರಮ ಟ್ರಸ್ಟ್ (ರಿ) ಗಂಡಿಬಾಗಿಲು

ಅಂದು

ಇಂದು

ಸಿಯೋನ್ ಅರ್ಥಾತ್ ದೈವ ಸಾಮ್ರಾಜ್ಯ!ಒಂದು ದೈವೀಚ್ಚೆಯಂತೆ ಯಶೋಧ ಎನ್ನುವ ಅನಾಥ ಮಹಿಳೆಯೊರ್ವಳಿಗೆ ಆಶ್ರಯತಾಣವಾಗಿ ಮಲೆನಾಡಿನ ಸೆರಗು. ಬೆಳ್ತಂಗಡಿಯ ಕುಗ್ರಾಮ ಯಾರೂ ಅರಿಯಾದ ನೆರಿಯಾದ ಗಂಡಿಬಾಗಿಲು ಎಂಬಲ್ಲಿ 1999ನೇ ಇಸ್ವಿ ಮಾರ್ಚ್ 22ನೇ ತಾರೀಖಿನಂದು ಸಾಕಾರಗೊಂಡಿತು. ಇದರ ರೂವಾರಿ ಗಂಡಿಬಾಗಿಲು ನಿವಾಸಿಯಾದ ಯು.ಸಿ. ಪೌಲೋಸ್. 2000ನೇ ಇಸ್ವಿ ಮಾರ್ಚ್ 28ರಂದು ಸಿಯೋನ್ ಆಶ್ರಮ ಟ್ರಸ್ಟ್ (ರಿ)ಎಂದು ನಾಮಕರಣಗೊಂಡ ಈ ಸಂಸ್ಥೆ 'ಮಾನಸಿಕ ಆಸ್ಪತ್ರೆ'ಯೆಂಬ ಸರಕಾರಿ ಪರವಾನಿಗೆ ಪಡೆಯಿತು. ನಾಗರಿಕ ಸಮಾಜದಿಂದ ದಿಕ್ಕರಿಸಲ್ಪಟ್ಟು ಬೀದಿಗೆ ಬಿದ್ದ ಅನಾಥರು, ಅಂಗವಿಕಲರು ಮಾನಸಿಕ ರೋಗಿಗಳು, ವೃದ್ಧರುಗಳೆಂಬ ದೇವರ ಮಕ್ಕಳನ್ನು ಜಾತಿ-ಮತ-ಭೇದವಿಲ್ಲದೇ, ಅನ್ನ-ಬಟ್ಟೆ-ಶುಶ್ರೂಷೆಕೊಟ್ಟು ಸಲಹುವ ಸದಾಶಯಗಳೊಂದಿಗೆ ಜನ್ಮ ತಾಳಿದ ಸಿಯೋನ್ ಆಶ್ರಮ ಟ್ರಸ್ಟ್ (ರಿ)ಗೆ ಇದೀಗ ಹತ್ತು ವರ್ಷಗಳನ್ನು ದೇವರ ಸೇವೆಯಲ್ಲಿ ಪೂರೈಸಿದ ಸಂತೃಪ್ತಿ. 'ದಶಮಾನೋತ್ಸವ ಸಂಭ್ರಮ.'

ಸದರಿ ಸಂಸ್ಥೆಯ ಗತ ದಿನಗಳತ್ತ ಹಿಂತಿರುಗಿ ನೋಡಿದರೆ ಇಲ್ಲಿ ತನಕ 1145ಮಾನಸಿಕ ರೋಗಿಗಳಿಗೆ ಆಶ್ರಯ ನೀಡಿ, ಈ ಪೈಕಿ 843ಮಂದಿ ಗುಣಮುಖರಾಗಿ ಹೊಸ ಚೈತನ್ಯದೊಂದಿಗೆ, ತಮ್ಮ ಮನೆಗೆ ಹಿಂತಿರುಗಿದ ಸಾರ್ಥಕತೆ ಸಿಯೋನ್ ಆಶ್ರಮ ಟ್ರಸ್ಟ್ (ರಿ)ನದ್ದು. ಯಾವುದೇ ಶಾಶ್ವತ ನಿಧಿಯ ಹಂಗಿಲ್ಲದೇ ಸರಕಾರದ ಯಾವುದೇ ಧನ-ಸಹಾಯಕ್ಕೆ ಕಾಯದೇ, ದೇವರ ಮೇಲೆ ಭಾರ ಹಾಕಿ ಊರ-ಪರವೂರ ದಾನಿಗಳ ತನು-ಮನ-ಧನದ ಸಹಾಯ - ಸಹಕಾರದಿಂದಲೇ ಇಲ್ಲಿ ತನಕ ಮುನ್ನಡೆಯುತ್ತಾ ಬಂದು, ವ್ಯವಸ್ಥಿತವಾದ ಕಟ್ಟಡ, ಮೂಲಭೂತ ಸವಲತ್ತುಗಳೊಂದಿಗೆ ಮನೋರೋಗ ಆಸ್ಪತ್ರೆಯಾಗಿ ರೂಪುಗೊಂಡ, ಸದರಿ ಸಂಸ್ಥೆಯಲ್ಲಿ ಪ್ರಸ್ತುತ 301ಮಂದಿ ಸದಸ್ಯರಿದ್ದಾರೆ. ಅವರಲ್ಲಿ ಮನೋರೋಗಿಗಳು 100,ಬುದ್ಧಿಮಾಂದ್ಯರು 69, ಅಂಗವಿಕಲರು 27,ವೃದ್ಧರು 54ಮತ್ತು ನಿರ್ಗತಿಕ ಮಕ್ಕಳು 51.

ಸಹಸಂಸ್ಥೆಗಳು:

1)ಸಿಯೋನ್ ಸ್ನೇಹ ಸ್ವ-ಸಹಾಯ ಸಂಘ:- ಈ ಮೇಲಿನ ಸದಾಶಯಗಳ ಜತೆಗೆ ಊರಿನ ಆರ್ಥಿಕ -ಸಾಮಾಜಿಕ -ಶೈಕ್ಷಣಿಕ ಅಭಿವೃದ್ಧಿಗೆ ಸಹಕರಿಸುವ ಉದ್ದೇಶದೊಂದಿಗೆ ಆರಂಭವಾದ ಸಿಯೋನ್ ಸ್ನೇಹ ಸ್ವ-ಸಹಾಯ ಸಂಘ. ಸಿಯೋನ್ ಆಶ್ರಮ ಟ್ರಸ್ಟ್‌ನ ಆದೀನ ಸಂಸ್ಥೆ. ಮಹಿಳಾ ಸಬಲೀಕರಣ ಮತ್ತು ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚು ಒತ್ತು ನೀಡುವ ಈ ಸ್ವ-ಸಹಾಯ ಸಂಘಟನೆ, ಬೆಳ್ತಂಗಡಿಯ 7ಗ್ರಾಮಗಳಲ್ಲಿ 99ಸ್ವ-ಸಹಾಯ ಗುಂಪುಗಳನ್ನು ಹೊಂದಿದ್ದು, 1,500ಮಂದಿ ಸದಸ್ಯರಿದ್ದಾರೆ. ಪ್ರಸ್ತುತ ತನ್ನ ಕಾರ್ಯ ವ್ಯಾಪ್ತಿಯನ್ನು ಕಾರ್ಕಳ ತಾಲೂಕಿಗೂ ವಿಸ್ತರಿಸಿದ್ದು ಅಲ್ಲಿ 31ಸ್ವ-ಸಹಾಯ ಗುಂಪುಗಳು ರಚಿತವಾಗಿದ್ದು 450ಮಂದಿ ಸದಸ್ಯರಿದ್ದಾರೆ. ಸದಸ್ಯೆಯರ 305 ಮಂದಿ ಮಕ್ಕಳ ವಿದ್ಯಾಭ್ಯಾಸಕ್ಕಾಗಿ 'ಕಾರಿತಾಸ್ ಪ್ರಾಗ್', ಎಂಬ ಸ್ವಯಂಸೇವಾ ಸಂಸ್ಥೆಯ ನೆರವಿನೊಂದಿಗೆ ಆರ್ಥಿಕ ಸಹಾಯವನ್ನು ಸ್ವ-ಸಹಾಯ ಸಂಘದ ಮುಖೇನ ನೀಡುತ್ತಾ ಬರಲಾಗಿದೆ. ಪ್ರತಿವರ್ಷವು ಸ್ವ-ಸಹಾಯ ಸಂಘದ ಪ್ರತಿ ಸದಸ್ಯರ ಒಂದು ಮಗುವಿಗೆ ಉಚಿತವಾಗಿ ಪುಸ್ತಕ, ಕೊಡೆ, ಬ್ಯಾಗು ಮತ್ತು ಶಾಲಾ ಶುಲ್ಕವನ್ನು ನೀಡುತ್ತಾ ಬಂದಿದ್ದು, 2009-10ನೇ ಸಾಲಿನಲ್ಲಿ 1150ಮಕ್ಕಳು ಇದರ ಪ್ರಲಾನುಭವಿಗಳಾಗಿದ್ದಾರೆ. ಸಿಯೋನ್ ಸ್ವ-ಸಹಾಯ ಸಂಘದ ಗುಂಪುಗಳಲ್ಲಿ ಸುಮಾರು 35ಲಕ್ಷ ರೂಪಾಯಿ ಆಂತರಿಕ ಸಾಲ ಹಾಗೂ ಬ್ಯಾಂಕ್ ಮುಖಾಂತರ 15ಗುಂಪುಗಳಿಗೆ 11ಲಕ್ಷ ರೂಪಾಯಿ ಸಾಲ-ಸೌಲಭ್ಯ ಪಡಕೊಂಡು ಸೂಕ್ತ ಉದ್ದೇಶಗಳಿಗೆ ವಿನಿಯೋಗಿಸಲಾಗಿದೆ.

2)ಲಿಟ್ಲ್ ಪವರ್ ಇಂಗ್ಲೀಷ್ ಮೀಡಿಯಂ ಸ್ಕೂಲ್:-

ನಮ್ಮ ಸಿಯೋನ್ ಆಶ್ರಮ ಟ್ರಸ್ಟ್‌ನ ನಿಸ್ವಾರ್ಥ ಸೇವೆಯನ್ನು ಕಣ್ಣಾರೆ ಕಂಡು ನಮ್ಮ 'ಆಶ್ರಮ'ದಲ್ಲಿರುವ ಅನಾಥ ಮಕ್ಕಳ ಭವಿಷ್ಯಕ್ಕೆ ಮರುಗಿ ಕಾರ್ಕಳದ ಮಹಾನುಭಾವರಾದ ಶ್ರೀ ಲಾರೆನ್ಸ್ ಸಲ್ಡಾನ್ನ, ತಾನು ಕೆಲ ವರ್ಷಗಳಿಂದ ನಡೆಸುತ್ತಿದ್ದ 'ಲಿಟ್ಲ್ ಪವರ್ ಇಂಗ್ಲೀಷ್ ಮೀಡಿಯಂ'ಸ್ಕೂಲನ್ನೇ ಟ್ರಸ್ಟ್‌ಗೆ ದಾನ ಮಾಡಿದ್ದಾರೆ. ಪ್ರಸ್ತುತ ಶೈಕ್ಷಣಿಕ ಸಾಲಿನಿಂದ ಸಿಯೋನ್ ಆಶ್ರಮವು ಕಾರ್ಕಳದ ಕಣಜಾರು ಎಂಬಲ್ಲಿನ ಗ್ಲಾರಿಡಾ ಎಜ್ಯುಕೇಶನ್ ಟ್ರಸ್ಟ್‌ಗೊಳಪಟ್ಟು, 'ಲಿಟ್ಲ್ ಪ್ಲವರ್ ಇಂಗ್ಲೀಷ್ ಮೀಡಿಯಂ'ಸ್ಕೂಲ್‌ನ ಆಡಳಿತವನ್ನು ವಹಿಸಿಕೊಂಡು ಮುನ್ನಡೆಸುತ್ತಿದೆ. ಎಲ್.ಕೆ.ಜಿ.ಯಿಂದ ತೊಡಗಿ 8ನೇ ತರಗತಿವರೆಗೆ 215 ಮಂದಿ ವಿದ್ಯಾರ್ಥಿಗಳು ವ್ಯಾಸಂಗದಲ್ಲಿ ತೊಡಗಿದ್ದಾರೆ. ಸಿಯೋನ್ ಆಶ್ರಮದ 51ಮಕ್ಕಳು ಕಾರ್ಕಳದ ಸದರಿ ವಿದ್ಯಾಸಂಸ್ಥೆಗೆ ದಾಖಲಾಗಿದ್ದು. ಈ ಮೂಲಕ ಉತ್ತಮ ಗುಣಮಟ್ಟದ ಶಿಕ್ಷಣ ಭಾಗ್ಯವನ್ನು ಪಡೆದಿದ್ದಾರೆ.

ಕೃತಜ್ಞತೆಗಳು:-

ಹೊಗಳಿಕೆಗೆ ಹಿಗ್ಗದೇ, ತೆಗಳಿಕೆಗೆ ತಗ್ಗದೇ 'ಜನಸೇವೆಯೇ ಜನಾರ್ದನ ಸೇವೆ' ಎಂಬ ವಿಶಾಲ ಮನೋಭಾನದಿಂದ ಮುನ್ನಡೆಸಿಕೊಂಡು ಬಂದಿರುವ ಸಿಯೋನ್ ಅನ್ನು ನೋಡುವ ಕುತೂಹಲದಿಂದ ಸ್ವದೇಶಿಗರಲ್ಲದೇ ಜರ್ಮನಿ, ಜಪಾನ್, ಇಟಲಿ, ಪ್ರಾನ್ಸ್, ಮೆಕ್ಸಿಕೋ, ಸೌತ್‌ಕೊರಿಯಾ, ನೆದರ್‌ಲ್ಯಾಂಡ್‌ಗಳ ಸಮಾಜಸೇವಕ ಬಂಧುಗಳು ಗಂಡಿಬಾಗಿಲಿಗೆ ಬಂದು ಆಶ್ರಮ ವಾಸಿಗಳ ಜತೆ ಒಂದಷ್ಟು ದಿನ ಕೂಡಿ ಕಳೆದು, ಬತ್ತಿದ ಎದೆ-ಮನಸ್ಸುಗಳಲ್ಲಿ ಹಸಿರು ಚಿಮ್ಮಿಸುವ ಪ್ರಯತ್ನ ಮಾಡುತ್ತಿರುತ್ತಾರೆ. ಅವರು ಕಲಿಸಿಕೊಟ್ಟ ಮೇಣದ ಬತ್ತಿ ತಯಾರಿ, ಪ್ಲವರ್ ಮೇಕಿಂಗ್, ಸಾಬೂನ್ ತಯಾರಿಕೆ, ಗ್ರೀಟಿಂಗ್ಸ್ ಕಾರ್ಡ್ ಇತ್ಯಾದಿಗಳಲ್ಲದೇ ಹಾಡು, ನೃತ್ಯಗಳಂತಹ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿ ನೋವನ್ನು ಮರೆತು ಹೊಸ ಜೀವನಕ್ಕೆ ಆಶ್ರಮವಾಸಿಗಳು ತುಡಿಯುತ್ತಿದ್ದಾರೆ. ನಮ್ಮ ಆಶ್ರಮಕ್ಕೆ ಭೇಟಿಯಿತ್ತ ಧರ್ಮಸ್ಥಳದ ಧರ್ಮಾಧಿಕಾರಿ ಪರಮ ಪೂಜ್ಯ ಡಾ||ಶ್ರೀ ವೀರೇಂದ್ರ ಹೆಗ್ಗಡೆಯವರು, ಅಡುಗೆ ಕೋಣೆ ಪರಿಕರಗಳ ಸಹಾಯದ, ಜತೆಗೆ ಮಕ್ಕಳಿಗೆ ಆಟದ ಸಾಮಾಗ್ರಿಗಳನ್ನು ನೀಡಿ ನಮ್ಮ ಸೇವೆಯನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದು ನೈತಿಕ ಬೆಂಬಲ ನೀಡಿದೆ. ದಶಮಾನೋತ್ಸವದ ಶುಭಾವಸರದಲ್ಲಿರುವ ಕೊನೆ ಕ್ಷಣದಲ್ಲಿ ಖಾವಂದರು ಆಶ್ರಮದ ಬಂಧುಗಳ ಹೊಟ್ಟೆ ತಣ್ಣಗಿರಲೆಂದು 10ಟನ್‌ನಷ್ಟು ಅಕ್ಕಿಯನ್ನು ದಾನ ಮಾಡಿದ್ದು ಸಿಯೋನ್ ಮಾನ್ಯರಿಗೆ ಚಿರಋಣಿಯಾಗಿದೆ. ಬೆಳ್ತಂಗಡಿ ಧರ್ಮಪ್ರಾಂತ್ಯದ ಧರ್ಮಾಧ್ಯಕ್ಷರಾದ ವಂದನೀಯ ಲಾರೆನ್ಸ್ ಮುಕ್ಕುಯಿಯವರು ಭೇಟಿ ನೀಡಿ ನಮ್ಮ ಸೇವೆಯನ್ನು ವೀಕ್ಷಿಸಿ, ದೇವರ ಆಶೀರ್ವಾದ ಮತ್ತು ಅನುಗ್ರಹ ಆಶ್ರಮದ ಮೇಲಿರಲೆಂದು ಶುಭಹಾರೈಸಿದ್ದೇರೆ . ಅಂತೆಯೇ ಮಂತ್ರಿಗಳು, ಶಾಸಕರು, ಜನಪ್ರತಿನಿಧಿಗಳು, ಸಮಾಜಸೇವಾ ಸಂಸ್ಥೆಗಳವರೆಂದು ನಮ್ಮ ಆಶ್ರಮಕ್ಕೆ ಭೇಟಿಯಿತ್ತರ ಪಟ್ಟಿ ದೊಡ್ಡದು. ಅದಲ್ಲದೇ ಜಿಲ್ಲಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳು, ಜಿಲ್ಲಾ ಆರೋಗ್ಯ ಅಧಿಕಾರಿಗಳು, ಸೇರಿದಂತೆ ಸರಕಾರಿ ಅಧಿಕಾರಿಗಳು ನಿರಂತರ ಭೇಟಿಯಿತ್ತು. ಸೂಕ್ತ-ಸಲಹೆ ಸೂಚನೆಗಳನ್ನು ನೀಡುತ್ತಾ ಸಿಯೋನ್ ಮನೋರೋಗ ಆಸ್ಪತ್ರೆಯ ಉನ್ನತಿಗೆ ಸಹಭಾಗಿಗಳಾಗಿದ್ದೇರೆ. ಇವರ ಸಹಕಾರದಿಂದ ಉಚಿತ ವೈದ್ಯಕೀಯ ಶಿಬಿರಗಳನ್ನು ನಡೆಸಲು ನಮಗೆ ಸಾಧ್ಯವಾಗಿದೆ. ಇನ್ನೂ ಮುಖ್ಯವಾಗಿ ಗಂಡಿಬಾಗಿಲಿನ ಕುಗ್ರಾಮದಲ್ಲಿ ಎಲೆ ಮರೆ ಕಾಯಿಯಂತಿದ್ದ ನಮ್ಮ ಸಂಸ್ಥೆ ಹಂತ ಹಂತವಾಗಿ ಬೆಳೆದು ದೇಶ-ವಿದೇಶಗಳತ್ತ ತೆರೆದುಕೊಳ್ಳುವತ್ತ ಈ ನಾಡಿನ ಪತ್ರಿಕೆ ಮತ್ತು ದೃಶ್ಯ ಮಾಧ್ಯಮಗಳ ಪಾತ್ರವೇ ದೊಡ್ಡದು. ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಅವರೆಲ್ಲರಿಗೂ ನಮ್ಮ ಟ್ರಸ್ಟ್ ಋಣಿಯಾಗಿದೆ. ದಿನಾಂಕ 10.10.2009ನೇ ಶನಿವಾರ ಅಂದು 'ವಿಶ್ವಮಾನಸಿಕ ಆರೋಗ್ಯ ದಿನ'ಈ ಸುದಿನವೇ ನಮ್ಮ ಸಂಸ್ಥೆಯ ದಶಮಾನೋತ್ಸವ ಆಚರಣೆ ಸುಯೋಗ ಪಡೆದಿದ್ದು ಹೆಮ್ಮೆ ಎನಿಸುತ್ತದೆ. ಹತ್ತು ವರ್ಷಗಳ ಹಿಂದೆ, ಹಿಂದು-ಮುಂದುಗಳ ಅಂದಾಜಿಲ್ಲದೆ ಸಣ್ಣ ಗುಡಿಸಲಲ್ಲಿ ಸಾಕಾರಗೊಂಡ ಸಿಯೋನ್ ಅರ್ಥಾತ್ ದೈವ ಸಾಮ್ರಾಜ್ಯವೊಂದು ಈ ಮಟ್ಟಕ್ಕೆ ಬೆಳೆದು ನಿಂತಿದೆ ಎಂದರೆ ಅದು ದೈವೀಚ್ಚೆಯಂತೆ ಆಗಿದೆ. ನಾವೆಲ್ಲ ಇಲ್ಲಿ ನೆಪ ಮಾತ್ರ. ನಮ್ಮ ಜತೆ ಹೆಗಲಿಗೆ ಕೊಟ್ಟು ಸಹಕರಿಸುತ್ತಾ ಬಂದಿರುವ ಊರ -ಪರವೂರ ದಾನಿಗಳು, ಸಂಘಸಂಸ್ಥೆಗಳು, ಸ್ವಯಂಸೇವಕರನ್ನು ಕೃತಜ್ಞತೆಯಿಂದ ನೆನೆಯಲು ಇದು ಸಕಾಲವಾಗಿದೆ.

●

ಪೂಜ್ಯ ಡಾ. ಹೆಗ್ಗಡೆಯವರು ಆಶ್ರಮಕ್ಕೆ ಭೇಟಿಯಿತ್ತಾಗ...

ಸಿಯೋನ್ ಆಶ್ರಮ ಟ್ರಸ್ಟ್ (ರಿ)
ಾಗಿಲು ಪೋಸ್ಟ್-574228.

ಸಿಯೋನಾಶ್ರಮ ಟ್ರಸ್ಟ್ (ರಿ) ಗೆ ಸಂದ ಪುರಸ್ಕಾರಗಳು.

1. ದಿನಾಂಕ 19-08-2000ರಂದು ಶತಾಬ್ದಿ ವಿದ್ಯಾಲಯ ಸಮಿತಿ. ಮುಂಡಾಜೆ ಪದವಿ ಪೂರ್ವ ವಿದ್ಯಾಲಯ ಮತ್ತು ಸರಸ್ವತಿ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ, ತಮ್ಮ "ಸ್ಥಾಪಕರ ದಿನಾಚರಣೆ"ಸಂದರ್ಭದಲ್ಲಿ ರೂಪಾಯಿ ಎರಡು ಸಾವಿರ ನಗದು ಮತ್ತು "ಅಭಿನಂದನ ಪತ್ರ"ನೀಡಿ ಗೌರವಿಸಿರುತ್ತಾರೆ.
2. ಕಾಣಿಕ್ ಪತ್ರಿಕೆಯ ವತಿಯಿಂದ ಫಲಕ ನೀಡಿ ಸನ್ಮಾನಿಸಿರುತ್ತಾರೆ.
3. ಲಯನ್ಸ್ ಕ್ಲಬ್ ಬಂಟಕಲ್ ಇವರು ರೂಪಾಯಿ ಐದು ಸಾವಿರ ನಗದು ಮತ್ತು "ಫಲಪುಷ್ಪ" ನೀಡಿ ಸನ್ಮಾನಿಸಿರುತ್ತಾರೆ.
4. ದಿನಾಂಕ 18-3-2001ರಂದು ಬೆಳ್ತಂಗಡಿಯಲ್ಲಿ ಜರುಗಿದ 12ನೇ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮಂಗಳೂರು "ಸನ್ಮಾನ ಪತ್ರ"ನೀಡಿ ಸನ್ಮಾನಿಸಿರುತ್ತಾರೆ.
5. ದಿನಾಂಕ 23-09-2002ರಂದು ಶ್ರೀಆಂಡ್ರೋ ಪೌಲ್, ಸಂಪಾದಕ ಪಟ್ಟಾಂಗ ಪತ್ರಿಕೆಯ ವತಿಯಿಂದ ಕೊಡಲ್ಪಡುವ ಸಾಧನಾ ಪ್ರಶಸ್ತಿಯಲ್ಲಿ ಅತ್ಯುತ್ತಮ "ಸಮಾಜ ಸೇವಕ" ಎಂಬ ಪ್ರಶಸ್ತಿ ನೀಢಲಾಗಿದೆ.
6. ದಿನಾಂಕ 15-08-2003ರಂದು 57ನೇ ಸ್ವಾತಂತ್ರ್ಯೋತ್ಸವದ ದಿನದಂದು ಕರ್ನಾಟಕ ಸರಕಾರದ ಘನವೆತ್ತ ರಾಜ್ಯಪಾಲರಿಂದ "ಪ್ರಶಂಸಾ" ಪತ್ರ ಮತ್ತು ಹತ್ತು ಸಾವಿರ ರೂಪಾಯಿಗಳ ಪುರಸ್ಕಾರ ನೀಡಿ ಸನ್ಮಾನಿಸಿರುತ್ತಾರೆ.
7. ದಿನಾಂಕ 22-08-2003ರಂದು ಮಂ.ರೈಟ್.ರೆ.ಡಾ. ಲಾರೆನ್ಸ್ ಮುಕ್ಕುಯಿ ಅವರು ಒಂದು ಸಾವಿರದ ಐನೂರು ರೂಪಾಯಿಗಳನ್ನು ಮತ್ತು ಫಲಪುಷ್ಪ ನೀಡಿ ಸನ್ಮಾನಿಸಿರುತ್ತಾರೆ.
8. ಜನ-ದನಿ ಮಂಡ್ಯ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರ ದಿವಂಗತ ಇಂಡುವಾಳು ಎಚ್. ಹೊನ್ನಯ್ಯ ಸ್ಮರಣಾರ್ಥ ದಿನಾಂಕ 06-09-2003ರಂದು ರೂಪಾಯಿ ಹತ್ತು ಸಾವಿರ ನಗದು, ಪ್ರಶಸ್ತಿ ಪತ್ರ ಮತ್ತು ಫಲಕ ನೀಡಿ ಸನ್ಮಾನಿಸಿರುತ್ತಾರೆ.
9. ಐ.ಸಿ.ವೈ.ಎಮ್. ಸಿಲ್ವರ್ ಜೂಬಿಲಿ ಪ್ರೊಜೆಕ್ಟ್, ಪಾಂಬೂರ್ ಶಾಂತಿಪುರ, ಉಡುಪಿ ಇವರು ರೂಪಾಯಿ ಹತ್ತು ಸಾವಿರ ನಗದು ಮತ್ತು ಫಲಕ ನೀಡಿ ಸನ್ಮಾನಿಸಿರುತ್ತಾರೆ.
10. ಐ.ಸಿ.ವೈ.ಎಮ್, ಯೂತ್ ತೋಟತ್ತಾಡಿ, ಇವರು ಓಣಂ ಹಬ್ಬದ ಪ್ರಯುಕ್ತ "ಫಲಪುಷ್ಪ"ನೀಡಿ ಸನ್ಮಾನಿಸಿರುತ್ತಾರೆ.
11. ದಿನಾಂಕ 19-10-2003ರಂದು ಮಂಗಳೂರು ವಿಶ್ವವಿದ್ಯಾಲಯ ಮಂಗಳಗಂಗೋತ್ರಿ ಧರ್ಮಪ್ರಾಂತ್ಯದ ಕ್ರೈಸ್ತ ವಿದ್ಯಾಪೀಠ ಇವರು ದೀನದಲಿತರ ಬಂಧು ಮದರ್ ತೆರೇಸಾ ಪ್ರೇರಣಾ ಸಮಾರಂಭದ ಪ್ರಯುಕ್ತ "ಫಲಕ" ಮತ್ತು "ಫಲಪುಷ್ಪ"ನೀಡಿ ಸನ್ಮಾನಿಸಿರುತ್ತಾರೆ.
12. ಸಂತ ಥೋಮಸರ ದೇವಾಲಯ, ಗಂಡಿಬಾಗಿಲು ಇದರ ವತಿಯಿಂದ "ಫಲಕ"ನೀಡಿ ಸನ್ಮಾನಿಸಿರುತ್ತಾರೆ.
13. ಜಿಲ್ಲಾ ಮಟ್ಟದ ರಾಜ್ಯೋತ್ಸವ ಸಮಿತಿ 2003ರ ಪ್ರಯುಕ್ತ ಉತ್ತಮ ಸಮಾಜ ಸೇವೆ ಪ್ರಶಸ್ತಿ ಪತ್ರ ನೀಡಿ ಗೌರವಿಸಿದೆ.
14. ದಿನಾಂಕ 3.12.03 ರಂದು ಅಂಗವಿಕಲರ ಕಲ್ಯಾಣ ರಾಜ್ಯ ಪ್ರಶಸ್ತಿ2003"ಉತ್ತಮ ಸಮಾಜ ಸೇವೆ"ರಾಜ್ಯ ಪ್ರಶಸ್ತಿ ಪತ್ರ ಮತ್ತು ಇಪ್ಪತ್ತೈದು ಸಾವಿರ ರೂಪಾಯಿಗಳ ಪುರಸ್ಕಾರ ನೀಡಿ ಗೌರವಿಸಿದೆ.
15. ದಿನಾಂಕ 01.10.2004ರಂದು ಅಂತಾರಾಷ್ಟ್ರೀಯ ಹಿರಿಯ ನಾಗರಿಕ ದಿನಾಚರಣೆಯ ಸಂದರ್ಭದಲ್ಲಿ ದ.ಕ.ಜಿಲ್ಲಾಡಳಿತ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮಂಗಳೂರು "ಪ್ರಶಂಸಾ ಪತ್ರ"ನೀಡಿ ಗೌರವಿಸಿದೆ.
16. ದಿನಾಂಕ 24.10.2004ರಂದು ಫ್ರೆಂಡ್ಸ್ ಸರ್ಕಲ್ ಬಯಲಂಗಡಿ, ನೆರಿಯ ಇವರು ಪ್ರಶಸ್ತಿ ಫಲಕ ನೀಡಿ ಸನ್ಮಾನಿಸಿರುತ್ತಾರೆ.
17. ದಿನಾಂಕ 25.01.2005ರಂದು ಗಣರಾಜ್ಯೋತ್ಸವದ ಅಂಗವಾಗಿ ಎನ್.ಆರ್.ಐ.ವೆಲ್ಫೇರ್ ಸೊಸೈಟಿ ಆಫ್ ಇಂಡಿಯಾ, ನ್ಯೂಡೆಲ್ಲಿ, "ಹಿಂದ್ ರತ್ತನ್ ಪ್ರಶಸ್ತಿ"ನೀಡಿ ಗೌರವಿಸಿದೆ.
18. ದಿನಾಂಕ 04.05.2005ರಂದು ಹೋಲಿ ಸ್ಪಿರಿಟ್ ಚರ್ಚ್ ಸಂಪಿಗೆ ಇವರು ಫಲಕ ನೀಡಿ ಸನ್ಮಾನಿಸಿರುತ್ತಾರೆ.
19. ದಿನಾಂಕ 11.11.2005ರಂದು www.daaiz.com,ಕುವೈಟ್ ಇವರು ಫಲಕ ಮತ್ತು 5ಲಕ್ಷದ ಐವತ್ತು ಸಾವಿರ ರೂಪಾಯಿಗಳ ಪುರಸ್ಕಾರ ನೀಡಿ ಗೌರವಿಸಿರುತ್ತಾರೆ.
20. ದಿನಾಂಕ 29.1.2006ಕೇರಳದಲ್ಲಿ ನಡೆದ ಎರಡನೆಯ ಕನ್ನಡ ಸಮ್ಮೇಳನವು ಶ್ರೀಮಾನ್ ಯು.ಸಿ.ಪೌಲೋಸ್‌ರವರಿಗೆ "ಉತ್ತಮ ಸಮಾಜ ಸೇವಕ"ಎಂಬ ಪ್ರಶಸ್ತಿ ನೀಡಿ ಗೌರವಿಸಿದೆ.
21. ದಿನಾಂಕ 29.4.2006ರಂದು ಐ.ಸಿ.ವ್ಯ.ಎಮ್, ಬಂಟ್ವಾಳ, ಇವರು "ಯುವ ಸಾನ್ಜ್ 2006"ಎಂಬ ಫಲಕ ನೀಡಿ ಗೌರವಿಸಿರುತ್ತಾರೆ.
22. ನಮ್ಮ ನಾಡು ದೂರದರ್ಶನ ಚಾನೆಲ್‌ರವರು ದಿನಾಂಕ 2.7.2006ರಂದು "ಅನಾಥ ಬಂಧು"ಎಂಬ ಫಲಕ ನೀಡಿ ಗೌರವಿಸಿರುತ್ತಾರೆ.
23. ಕೆಥೋಲಿಕ್ ಕೊಂಕಣಿ ರಾಖಿನ್ ಸಂಚಲನ್ ಚಿಕ್ಕಮಗಳೂರು, ಇವರ ವತಿಯಿಂದ ದಿನಾಂಕ 14.01.2007ರಂದು ರೂಪಾಯಿ ಇಪ್ಪತ್ತೈದು ಸಾವಿರ ನಗದು ಮತ್ತು ಶಾಲು ಹೊದಿಸಿ "ಫಲಪುಷ್ಪ"ನೀಡಿ ಸನ್ಮಾನಿಸಿರುತ್ತಾರೆ.
24. ದಿನಾಂಕ 08.03.2007ರಂದು ಕನ್ನಡ ಸಂಘ ಬಹ್ರೈನ್ ಇವರು ಪ್ರಶಸ್ತಿ ಫಲಕ ನೀಡಿ ಸನ್ಮಾನಿಸಿರುತ್ತಾರೆ.

ಕರ್ನಾಟಕ
ಅಂಗವಿಕಲರ ಕಲ್ಯಾಣ
ವಿಶ್ವ ಅಂಗವಿಕಲರ
200

ಭಾವೀ ಕನಸುಗಳು

1. ಆರ್ಥಿಕವಾಗಿ ಹಿಂದುಳಿದವರಿಗೆ ಚಿಕಿತ್ಸೆ, ಮನೆ ದುರಸ್ತಿ ಮತ್ತು ಮದುವೆಗೆ ಆರ್ಥಿಕ ಸಹಾಯ ಕಲ್ಪಿಸುವುದು.
2. ಅವಶ್ಯಕತೆ ಕಂಡುಬಂದಲ್ಲಿ ನಮ್ಮ ಕನ್ನಡ ನಾಡಿನ ಇತರೆಡೆಗಳಲ್ಲಿಯೂ ಇಂತಹುದೇ ನಿರ್ಲಕ್ಷಿತರ ಶಾಖೆ ಸ್ಥಾಪನೆ.
3. ಸ್ವ-ಸಹಾಯ ಗುಂಪುಗಳ ಬಲವರ್ಧನೆಗೆ ವಿಶೇಷ ಯೋಜನೆಗಳು.
4. ಸ್ವ-ಸಹಾಯ ಗುಂಪುಗಳ ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವುದು.
5. ನಮ್ಮಲ್ಲಿ ಚಿಕಿತ್ಸೆ ಪಡೆಯುತ್ತಿರುವ ಅಂಗವಿಕಲರು, ವೃದ್ಧರು ಮತ್ತು ಮಕ್ಕಳಿಗೆ ಪ್ರತ್ಯೇಕ ವಿಭಾಗಗಳ ಸ್ಥಾಪನೆ ಮತ್ತು ಗುಣಮುಖರಾದವರಿಗೆ ಪುನರ್ವಸತಿ ಕೇಂದ್ರ ಸ್ಥಾಪನೆ.

ಸಿಯೋನ್ ಆಶ್ರಮ ಗಂಡಿಬಾಗಿಲು

ನಿರ್ಗತಿಕರು, ಸಹಾಯಕರ ಸೇವೆಗೆ ಸದಾ ತುಡಿಯುವ ನಿಯೋನಾಶ್ರಮ ಟ್ರಸ್ಟ್ ತನ್ನ ವ್ಯಾಪ್ತಿ ಮೀರಿದ ಸೇವಾ ಕೈಂಕರ್ಯವನ್ನು ಹೊಂದಿದೆ. ವಿವಿಧ ಇಲಾಖೆಗಳ ಸಹಯೋಗದೊಂದಿಗೆ ದಿನಾಂಕ 28-3-2007ರಂದು ಬೆಳ್ತಂಗಡಿಯಲ್ಲಿ ಸಿ.ವಿ.ಸಿ ಹಾಲ್‌ನಲ್ಲಿ ಜರುಗಿದ ಅಂಗವಿಕಲರ ಗುರುತು ಚೀಟಿ ವಿತರಣಾ ಕಾರ್ಯಕ್ರಮ ಸಿಯೋನ್‌ನ ಸಾಮಾಜಮುಖೀ ಕಾರ್ಯಕ್ರಮಗಳಲ್ಲಿ ಒಂದು. ಅಂದು ಸುಮಾರು 1443ಮಂದಿ ಅಂಗವಿಕಲರು ಈ ಗುರುತು ಪತ್ರದ ಪ್ರಯೋಜನ ಪಡೆದಿದ್ದರು.

ಸಂದೇಶ

"I have the joy of visiting Seon Ashram and seeing the good work being love here in the name of Lord Jesus. It is really a great work. I congratulate Mr.U.C.Paulose and all the team members. May the Lord Jesus bless this Ashram and shower his blessing continuously on this.

Rev. Lawrence MukkuzhyBishop of Belthangady (on his visit to ashram on 18-05-2008)

ದಿನಾಂಕ 4.4.2004 ರಂದು ಸಿಯೋನ್ ಆಶ್ರಮಕ್ಕೆ ಭೇಟಿ ನೀಡಿದ್ದೆ. ಆಶ್ರಮದಲ್ಲಿ ಮನೋರೋಗಿಗಳಿಗೆ ನೀಡುವ ಆಶ್ರಯ, ಅವರಿಗೆ ನೀಡುತ್ತಿರುವ ಆರೈಕೆಯನ್ನು ಕಂಡು ಸಂತೋಷಪಟ್ಟೆ. ಈ ಆಶ್ರಮದಿಂದ ಮುಂದೆ ಅನೇಕ ಮಂದಿಗೆ ಪ್ರಯೋಜನ ಆಗಲಿ ಎಂದು ಹಾರೈಸುತ್ತೇನೆ.

ಕೆ. ವಸಂತ ಬಂಗೇರ

ಮಾಜಿ ಶಾಸಕ, ಬೆಳ್ತಂಗಡಿ.

ಈ ದೈವ ಸಾಮ್ರಾಜ್ಯವನ್ನು ನೀವು ಕಂಡಿದ್ದೀರಾ?

ನೀನು ಬರೆದ ಸುಂದರ ಪುಸ್ತಕ
ಈ ಜಗತ್ತು!
ನಿಜ, ಒಪ್ಪಿದೆ. ಆದರೆ ದೇವರೇ,
ರೋಗ,
ರುಜಿನ, ದಾರಿದ್ರ್ಯ, ಕಣ್ಣೀರು
ಇವುಗಳು ನಿನ್ನ ಪರೀಕ್ಷೆಗಳೇ?
ಅಥವಾ ಅಚ್ಚಿನ ತಪ್ಪುಗಳೇ?
-ಅಮೃತಾ ಪ್ರೀತಂ

ಸಿಯೋನ!

ಹಿಬ್ರೂ ಭಾಷೆಯಲ್ಲಿ ಹಾಗಂದರೆ ದೇವರು ವಿಹರಿಸುವ ಸ್ಥಳವೆಂದು ಅರ್ಥ. ಬೇಕಿದ್ದರೆ ದೇವರ ಸಾಮ್ರಾಜ್ಯವೆಂದೂ ಹೇಳಬಹುದು. ಇಂತಹದೊಂದು ದೇವಲೋಕ ಈ ಭೂಮಿಯ ಮೇಲೇ ಇದೆ. ಹೆಸರು ಸಿಯೋನ ಆಶ್ರಮ! ಬೆಳ್ತಂಗಡಿ ತಾಲೂಕಿನ ಗಂಡಿಬಾಗಿಲು ಎಂಬಲ್ಲಿ ಈ ದೈವ ಸಾಮ್ರಾಜ್ಯ ಜೀವ ತಳೆದಿದೆ.

ದೇವರ ಸಾಮ್ರಾಜ್ಯವೆಂದಾಕ್ಷಣ ಇದೊಂದು ಭೋಗ ವಿಲಾಸಗಳ ತಾಣವೆಂದು ನರ ಮನುಷ್ಯರು ಆಸೆ ಪಡಬೇಕಾಗಿಲ್ಲ. ದೇವರ ಕಾರುಣ್ಯವೆಂಬುದು ನಾಲ್ಕು ದಿಕ್ಕುಗಳಿಂದ ಒಸರುತ್ತಿದ್ದರೂ, ಮನುಷ್ಯ ವಿಷಯಾಸಕ್ತಿಯನ್ನು ತಣಿಸುವ ತಾಣ ಮಾತ್ರ ಇದಲ್ಲ. ದೇವರ ಸೃಷ್ಟಿಯಲ್ಲಿ ಆತನದೇ ಅಚ್ಚಿನ ತಪ್ಪುಗಳಂತಿರುವ ಮನುಷ್ಯ ಜೀವಗಳ ದುರಂತಗಳಿಗೆ ಸಾಂತ್ವನ ಲಭಿಸುವಂತಹ ಅಭಯಾಶ್ರಮವಿದು. ಜಗತ್ತಿನ ದೈವ ಭಕ್ತರು ಪೂಜೆ, ಭಜನೆ, ಗದ್ದಲಗಳ ಮೂಲಕ ದೇವರನ್ನು ತಲುಪುತ್ತೇವೆಂದು ಹೊರಟಿರುವಾಗ ಯು.ಸಿ.ಪೌಲೋಸ್ ಎಂಬ ಅನಕ್ಷರಸ್ಥ ಕ್ರೈಸ್ತ, ಪರಿತ್ಯಕ್ತರ ಸೇವೆಯ ಮೂಲಕ ದೇವರನ್ನು ತಲುಪುತ್ತೇನೆಂದು ಹಂಬಲಿಸಿದಾಗ ಜನ್ಮ ತಾಳಿದ್ದೇ ಸಿಯೋನ ಆಶ್ರಮ.

ಮನುಷ್ಯ ಸಾಯುವ ಮುನ್ನ ಒಮ್ಮೆ ಕಂಡು ಬಿಡಬೇಕಾಗಿರುವುದು ಪುಣ್ಯ ಕ್ಷೇತ್ರಗಳನ್ನಲ್ಲ; ಸಿಯೋನದಂತಹ ಒಂದು ಆಶ್ರಮವನ್ನು! ಬೆಳ್ತಂಗಡಿ ಎಂಬ ಗ್ರಾಮಾಂತರ ತಾಲೂಕಿನ ಗರ್ಭದೊಳಗಿರುವ ಸಿಯೋನದಂತಹ ಆಶ್ರಮ ಮನುಷ್ಯರ ಕಣ್ಣಿಗೆ ಬೀಳುವುದು ಅಷ್ಟು ಸುಲಭವೂ ಅಲ್ಲ. ತಮ್ಮ ಆತ್ಮಸಾಕ್ಷಿಯನ್ನು ತಿವಿಯುವಂತಹ ಮಾನವ ದುರಂತಗಳನ್ನು ಕಾಣುವುದು ಯಾರಿಗೂ ಬೇಕಾಗಿಲ್ಲವಾದ್ದರಿಂದ ಇಂತಹ ಆಶ್ರಮಗಳು ಯಾರ ಆಸಕ್ತಿಯನ್ನೂ ಕೆರಳಿಸುವುದಿಲ್ಲ. ಸಿಯೋನಾಶ್ರಮ ಎಂಬ ಕರುಣೆಯ ಒರತೆ ಒರೆಸುವ ಜಾಗಕ್ಕೆ ತಲುಪಬೇಕೆಂದರೆ ಉಜಿರೆಯಿಂದ 20ಕಿ.ಮಿ. ದೂರದಲ್ಲಿರುವ ಗಂಡಿ ಬಾಗಿಲು ಎಂಬಲ್ಲಿಗೆ ಬರಬೇಕು. ಆಶ್ರಮದ ಒಳಹೊಕ್ಕು ನೋಡಿದರೆ ನಿಮ್ಮ ಎದೆಯೇ ಒಡೆದು ಹೋಗುವಂತಹ ವಿಭಿನ್ನ ಬಗೆಯ ಭಗ್ನ ಚಿತ್ರಗಳು. ಬದುಕಿನ ಲಯವೇ ತಪ್ಪಿಹೋಗಿ ಅಲ್ಲಲ್ಲಿ ಮಿಸುಕಾಡುವ ಜೀವಿಗಳಿಗೆ ಮನುಷ್ಯರೆಂಬ ಘನತೆಯನ್ನು ತಂದುಕೊಡಲು ಅನುಕ್ಷಣವೂ ಹೋರಾಡುತ್ತಿರುವ ಯು.ಸಿ.ಪೌಲೋಸ್ ಮತ್ತು ಮೇರಿ ದಂಪತಿಗಳು, ಒಂದೊಂದು ಜೀವದ ಮುಂದೆಯೂ ನಿಮ್ಮನ್ನು ನಿಲ್ಲಿಸಿ ಪರಿಚಯಿಸಿ ಕೊಡುವಾಗ ನೀವು ನಿಮಗರಿವಿಲ್ಲದೇ ನಿಮ್ಮ ಆಕಾಶ ಕೋಟೆಯಿಂದ ಭೂಮಿಗಿಳಿದಿರುತ್ತೀರಿ. ನಿಮ್ಮ ಅಟ್ಟಹಾಸ, ಮದ, ಅಹಂಕಾರಗಳೆಲ್ಲವೂ ಅದೆಲ್ಲೋ, ಬಾಲ ಮುದುರಿ ಅಡಗಿಕೊಳ್ಳುತ್ತದೆ. ನೀವು ನಿಮ್ಮೊಳಗೇ ಕುಸಿದು ಹೋಗಲಿಲ್ಲ ಎಂದಾದರೆ ನೀವು ಮನುಷ್ಯರೇ ಅಲ್ಲವೆಂದು ಅರ್ಥ.

ಕುಷ್ಠರೋಗದಿಂದ ಮಂಜುಗಡ್ಡೆಯಂತೆ ಕರಗುತ್ತಿರುವವರು, ಇಹಪರದ ಅರಿವಿಲ್ಲದೆ ಶೂನ್ಯದಲ್ಲಿ ದೃಷ್ಟಿನೆಟ್ಟು ಹೋದ ಮತಿ ವಿಕಲರು, ಕಿವಿ, ಕಣ್ಣು, ಕೈ ಕಾಲು ಕಳೆದು ಬದುಕಿನ ಊರುಗೋಲನ್ನೇ ಕಳೆದುಕೊಂಡವರು. ಅಂತಿಮ ಕರೆಗೆ ತಮ್ಮ ಕಿವಿಗಳನ್ನು ಆನಿಸಿ ಕೂತ ವಯೋವೃದ್ಧರು ತಮ್ಮ ಬಂಧುಗಳಿಗೇ ಬೇಡವಾಗಿ ಬೀದಿಗೆ ಬಿದ್ದ ಇವರು ಯು.ಸಿ.ಪೌಲೋಸರ ಮಾತಿನಲ್ಲಿ 'ಸಿಯೋನಾಶ್ರಮದ ಮಕ್ಕಳು'. ನಾವು ಅಂಧರ, ಅನಾಥರ, ಮತಿ ವಿಕಲರ ಅನೇಕ ಬಗೆಯ ಆಶ್ರಮಗಳನ್ನು ಕಂಡಿರುತ್ತೇವೆ. ಆದರೆ ಕಸದ ತೊಪ್ಪೆಯಂತೆ ಬೀದಿಯಲ್ಲಿ ಬಿದ್ದ ಮನುಷ್ಯ ಜೀವಗಳನ್ನು ಎತ್ತಿ ತಂದು ಪೌಲೋಸ್ ಮಾಡುವ ಸೇವೆಗೆ ಯಾವುದೂ ಸಾಟಿಯಿಲ್ಲ. ಕಸದ ತೊಟ್ಟಿಯಲ್ಲಿನ ಎಂಜಲೆಲೆ ನೆಕ್ಕುತ್ತಿದ್ದವರನ್ನು, ಬಸ್‌ಸ್ಟ್ಯಾಂಡ್ ಕಟ್ಟೆಯಲ್ಲಿ ಮೈಯಿಡೀ ವ್ರಣಗಳಾಗಿ ಕರಗುತ್ತಿದ್ದವರನ್ನು, ಬೀದಿಗೆ ಬಿದ್ದು ಕಂಡವರ ತೆವಲಿಗೆ ಈಡಾಗುತ್ತಿದ್ದ ಹರೆಯದ ಮತಿಭ್ರಮಿತ ಹೆಣ್ಣುಮಕ್ಕಳನ್ನು ವಾಸನೆ, ಮೈಲಿಗೆಗೆ ಅಂಜದೆ ಪೌಲೋಸ್‌ರು ತನ್ನ ಎರಡೂ ಕೈಗಳಲ್ಲಿ ಎತ್ತಿ ತಂದು ತನ್ನ ಆಶ್ರಮದಲ್ಲಿಟ್ಟು ಸಾಕಿದ್ದಾರೆ. ಈಗಲೂ ಸಾಕುತ್ತಿದ್ದಾರೆ. ಅವರ ಘನಘೋರ ವ್ರಣಗಳನ್ನು ತೊಳೆದು, ವರ್ಷಗಟ್ಟಳೆ ನೀರು ಕಾಣದ ತಲೆಯನ್ನು ಸ್ವಯಂ ತಾನೇ ನಿಂತು ಕ್ಷೌರ ಮಾಡಿ ಸ್ನಾನ ಮಾಡಿಸಿ ತನ್ನ ಮನೆಯ ಒಲೆಯಲ್ಲಿ ಬೆಂದ ಅನ್ನವನ್ನೇ ಮಕ್ಕಳಿಗೆ ಉಣಿಸುವಂತೆ ಉಣಿಸಿದ್ದಾರೆ. ಸಿಯೋನಾಶ್ರಮದಲ್ಲಿ ದೇವರಿಲ್ಲ ಎಂದಾದರೆ ಆತ ಇನ್ನೆಲ್ಲಾದರೂ ಇರುವುದು ಸಾಧ್ಯವೇ?

ಸಿಯೋನಾಶ್ರಮದ ಕೆಲವು ದೃಶ್ಯಗಳು

ಮತಿ ವಿಕಲರೂ ಆಗಿದ್ದ ವೃದ್ಧ ಕರಿಯ ಶೆಟ್ಟಿ ತನ್ನ ಮನೆ ಮಂದಿಯ ನಿರ್ಲಕ್ಷ್ಯದಿಂದಾಗಿ ಬೀದಿ ಪಾಲಾಗಿದ್ದರು. ಉಡುಪಿ ಮೂಲದವರಾಗಿದ್ದ ಕರಿಯ ಶೆಟ್ಟಿ ಅದೇಕೋ ಕಕ್ಕಿಂಜೆಯ ಹಳೆ ಸಿಂಡಿಕೇಟ್ ಬ್ಯಾಂಕ್ ಕಟ್ಟೆಯಲ್ಲಿ ಬಂದು ಬಿದ್ದಿದ್ದರು. ಕುತ್ತಿಗೆಯ ಬಳಿಯಿದ್ದ ಕ್ಯಾನ್ಸರ್ ಗಡ್ಡೆಯಿಂದ ಕೀವೊಡೆದು ಮಾರು ದೂರಕ್ಕೆ ದುರ್ವಾಸನೆ ಹಬ್ಬಿತ್ತು. ಮೈಯಿಡೀ ಊದಿ ಕುಂಬಳಕಾಯಂತಾಗಿತ್ತು. ಮೂರು ಹಗಲು, ಮೂರು ರಾತ್ರಿ ಆ ಕಟ್ಟೆಯಲ್ಲಿ ಅನಾಥರಾಗಿ ಬಿದ್ದಿದ್ದ ಕರಿಯ ಶೆಟ್ಟಿ ಕೊನೆಗೆ ಪೌಲೋಸರ ಕಣ್ಣಿಗೆ ಬಿದ್ದು ಸಿಯೋನಾಶ್ರಮ ಸೇರಿದರು. ಮೂರು ತಿಂಗಳು ಕರಿಯ ಶೆಟ್ಟಿಯ ಆರೈಕೆ ಮಾಡಿದ ಪೌಲಸ್ ದಂಪತಿಗಳು ವಾಸಿಯಾದ ಬಳಿಕ ಅವರ ಮನೆಗೆ ಕಳಿಸಿಕೊಟ್ಟರು.

ಮಂಗಳೂರಿನ ಜ್ಯೋತಿ ಸರ್ಕಲಿನಲ್ಲಿ ಮೈಗೆ ಬರೇ ಪ್ಲಾಸ್ಟಿಕ್ ಸುತ್ತಿಕೊಂಡು ಅಲೆದಾಡುತ್ತಿದ್ದ ಹುಚ್ಚಿಯೊಬ್ಬಳಿದ್ದಳು. ಕಾಸರಗೋಡಿನವಳಾದ ಈಕೆ ಅಲ್ಲಿ ಹಿಂದಿ ಟೀಚರಾಗಿದ್ದಳು. ಯಾರೋ ಒಬ್ಬ ಪ್ರೀತಿಸಿ ಕೈ ಕೊಟ್ಟಾಗ ಇವಳಿಗೆ ಮತಿ ಭ್ರಾಂತಿಯಾಯಿತು. ಮತಿಭ್ರಾಂತಳನ್ನು ಮನೆಯಲ್ಲಿಟ್ಟು ಚಿಕಿತ್ಸೆ ಮಾಡುವ ವ್ಯವಧಾನವಿಲ್ಲದ ಮನೆಯವರು ಬೀದಿಗಟ್ಟಿದರು. ಬೀದಿಗೆ ಬಿದ್ದವಳು ಇನ್ನೂ ಒಂದಷ್ಟು ಮಹನೀಯರ ತೆವಲಿಗೆ ಬಲಿಯಾಗಿ ಪೂರ್ತಿ ಪ್ರಮಾಣದ ಹುಚ್ಚಿಯಾಗಿ ಮಂಗಳೂರಿಗೆ ಬಂದು ತಲುಪಿದಳು. ತಿಪ್ಪೆಯಲ್ಲಿದ್ದ ಎಂಜಲು ಬಾಚುತ್ತಾ ಮೈಗೆ ಪ್ಲಾಸ್ಟಿಕ್ ಸುತ್ತಿಕೊಂಡು ಮಳೆ-ಗಾಳಿಯೆನ್ನದೆ ಬೀದಿ ಅಲೆಯುತ್ತಿದ್ದವಳನ್ನು ಪೌಲೋಸ್ ತನ್ನ ಆಶ್ರಮಕ್ಕೆ ತಂದು ಅನ್ನ-ಬಟ್ಟೆ-ಔಷಧ ನೀಡಿದರು. ಈಗ ಗುಣಮುಖಳಾಗಿರುವ ಈಕೆ ತನ್ನ ಸೇವೆಯನ್ನು ಆಶ್ರಮಕ್ಕೆ ಮುಡಿಪಾಗಿಟ್ಟಿದ್ದಾಳೆ.

ಶಿಬಾಜೆಯ ಸೀತಾ ಎಂಬವಳಿಗೆ ಮತಿ ಭ್ರಮಣೆಯಾದಾಗ ಮನೆಯವರು ಅವಳನ್ನು ಬೀದಿಗಟ್ಟಿಬಿಟ್ಟರು. ಹುಚ್ಚಿಯನ್ನು ಬಿಡದ ಕೆಲವು ಪುರುಷಾಗ್ರೇಸರು ಆಕೆಗೆ 'ಗರ್ಭ'ವನ್ನು ದಯಪಾಲಿಸಿ ಬಿಟ್ಟರು. ಸರಿಯಾದ ಪೋಷಕಾಂಶವೂ ಇಲ್ಲದ ತುಂಬಿದ ಬಸುರಿ, ಬೀದಿಯಲ್ಲಿ ಸ್ಮೃತಿ ತಪ್ಪಿ ಬಿದ್ದವಳನ್ನು ಯಾರೋ ಬೆಳ್ತಂಗಡಿ ಸರಕಾರಿ ಆಸ್ಪತ್ರೆಗೆ ಸೇರಿಸಿದರು. ತಾಯಿ ಮಗು ಎರಡೂ ಉಳಿಯಲಾರದು ಎಂದು ಲೆಕ್ಕ ಹಾಕಿದ ವೈದ್ಯರು ಮೆಲ್ಲಗೆ ಸಿಯೋನಾಶ್ರಮಕ್ಕೆ ಸಾಗ ಹಾಕಿದರು. ಪೌಲೋಸರ ಕರುಣಾಶ್ರಮದಲ್ಲಿ ತಾಯಿ ಮಗು ಇಬ್ಬರೂ ಬದುಕಿಕೊಂಡರು. ಮಗುವಿಗೀಗ ಒಂದೂವರೆ ವರ್ಷ. ಇಷ್ಟೆಲ್ಲಾ ಆದರೂ ಆಶ್ರಮಕ್ಕೆ ಕೂಗಳತೆ ದೂರದಲ್ಲಿರುವ ಸೀತಾಳ ಮನೆಯವರು ಈ ಕಡೆ ಇಣುಕಿಯೂ ನೋಡಿಲ್ಲ.

ಜ್ಯೋತಿ ಎಂಬ ಆರು ವರ್ಷದ ಪುಟ್ಟ ಬಾಲೆಯದ್ದು ಬೇರೆಯೇ ಒಂದು ದುರಂತ ಕಥೆ. ಐದು ತಿಂಗಳ ಹಿಂದೆ ಹಾಸನದ ಚೊಕ್ಕಪಟ್ಟಣದವರಾದ ಜ್ಯೋತಿಯ ತಂದೆ ತಾಯಿ ಮಗಳ ಸಮೇತ ಧರ್ಮಸ್ಥಳಕ್ಕೆ ಬಂದಿದ್ದವರು, ಸ್ಥಳೀಯ ಜ್ಯೋತಿಷಿಯೊಬ್ಬನಲ್ಲಿ ತಮ್ಮ ಗ್ರಹಗತಿ ಬಗ್ಗೆ ವಿಚಾರಿಸಿದ್ದರು. ಆತ ಮಗಳೇ 'ನಿಮ್ಮ ಕಂಟಕದ ಮೂಲ' ಎಂದು ಬೊಗಳಿ ಬಿಟ್ಟನಂತೆ.

→

ಪರಿಣಾಮವಾಗಿ ಆ ಮುತ್ಯಾಳ ತಂದೆ ತಾಯಿ ತಮ್ಮ ಆರು ವರ್ಷದ ಮಗಳನ್ನು ಧರ್ಮಸ್ಥಳ ಬಸ್‌ಸ್ಟ್ಯಾಂಡ್‌ನಲ್ಲಿಯೇ ಬಿಟ್ಟು ತಾವಿಬ್ಬರೇ ಹಾಸನದ ಬಸ್ಸು ಹತ್ತಿದರು. ತಮ್ಮ ಬೆನ್ನ ಹಿಂದೆ ಓಡಿ ಬಂದ ಮಗುವಿಗೆ ಎದೆಗೆ ಒದ್ದು ದೂರ ತಳ್ಳಿದರು. ಗದ್ದಲ ಕಂಡು ವಿಚಾರಿಸಿದವರಿಗೆ, 'ಯಾರದೋ ಬಿಕನಾಸಿ ಮಗು' ಎಂದುತ್ತರಿಸಿದರು. ಹಾಗೆ ಬಸ್ ಸ್ಟ್ಯಾಂಡಿನಲ್ಲಿ ಮೂರು ದಿನ ಅನ್ನ ನೀರಿಲ್ಲದೇ ಅತ್ತು ಕರೆದು ಬಿದ್ದಿದ್ದವಳನ್ನು ಯಾರೋ ಸಿಯೋನಾಶ್ರಮಕ್ಕೆ ಸೇರಿಸಿದರು. ಪೌಲೋಸ್ ಎರಡೂ ಕೈ ನೀಡಿ ಆ ಮಗುವನ್ನು ಸ್ವೀಕರಿಸಿದರು. ಜ್ಯೋತಿ ಈಗ ಆಶ್ರಮದಲ್ಲಿದ್ದೇ ಒಂದನೇ ಕ್ಲಾಸು ಓದುತ್ತಿದ್ದಾಳೆ. ಕಲಿಯುವುದರಲ್ಲಿ ಚೂಟಿ.

ಮೈಸೂರಿನ ಒಬ್ಬ ಮಹಾ ತಾಯಿಗೆ ಕಣ್ಣು-ಕಾಲು-ಬಾಯಿ ಮೂರು ಇಲ್ಲದ ಮಗು ಹುಟ್ಟಿ ಬಿಟ್ಟಿತ್ತು. ನೋಡುವಷ್ಟು ದಿನ ನೋಡಿದಳು. ಒಂದು ದಿನ ಮಗುವನ್ನು ಅನಾಮತ್ತು ನದಿಗೆತ್ತಿ ಬಿಟ್ಟಳು. ಅದ್ಯಾರೋ ಕಾಪಾಡಿ ಸಿಯೋನಾಶ್ರಮ ತಲುಪಿದ ಬಸವರಾಜನೆಂಬ ಹೆಸರಿನ ಆ ಮಗು ಈಗ ಮಾತು ನಡಿಗೆ ಎರಡನ್ನೂ ಕಲಿಯುತ್ತಿದೆ.

ಮನುಷ್ಯ ಜೀವನದ ಭಗ್ನ ಚಿತ್ರಗಳೇ ಲಭ್ಯವಾಗುವ ಸಿಯೋನಾಶ್ರಮದಲ್ಲಿ ಒಮ್ಮೊಮ್ಮೆ ವಿಶೇಷ ಘಟನೆಗಳೂ ನಡೆಯುವುದಿದೆ. ತಿಮ್ಮಪ್ಪ ಪೂಜಾರಿ ಬಂಟ್ವಾಳ ಕಡೆಯ ಮತಿಭ್ರಮಿತ ವ್ಯಕ್ತಿ. ಈತನ ಹಾವಳಿ ತಡೆಯಲಾರದೆ ಮನೆಯವರು ಈತನ ಕೈ ಕಾಲು ಕಟ್ಟಿ ಸಿಯೋನಾಶ್ರಮಕ್ಕೆ ಎಸೆದು ಹೋದರು. ಪೌಲೋಸ್‌ರ ಆರೈಕೆಯಲ್ಲಿ ಗುಣಮುಖರಾದ ತಿಮ್ಮಪ್ಪ ಪೂಜಾರಿ ಬಳಿಕ ಆಶ್ರಮದಲ್ಲೇ ಸೇವೆಗೆ ನಿಂತರು. ಅದೇ ಹೊತ್ತಿನಲ್ಲಿ ಕೂಳೂರಿನ ನಮಿತಾ ಎಂಬ ಕ್ರಿಶ್ಚಿಯನ್ ಹುಡುಗಿ ಮತಿ ಭ್ರಮಣೆಗೀಡಾದವಳನ್ನು ಯಾರೋ ಸಿಯೋನಾಶ್ರಮಕ್ಕೆ ತಂದು ಬಿಟ್ಟರು. ಅಲ್ಲಿ ಆಕೆ ಗುಣಮುಖಳಾದಳು. ಕ್ರಮೇಣ ತಿಮ್ಮಪ್ಪ ಪೂಜಾರಿ ಮತ್ತು ನಮಿತಾ ನಡುವೆ ಪ್ರೇಮಾಂಕುರವಾಗಿ ಮದುವೆಯಾಗುವ ಇಚ್ಛೆಯನ್ನು ಪೌಲೋಸ್ ಬಳಿ ಹೇಳಿಕೊಂಡರು. ಆದರೆ ಇಬ್ಬರದೂ ವಿಭಿನ್ನ ಧರ್ಮಗಳಾದುದರಿಂದ ಅವರಿಬ್ಬರ ಮನೆಯವರ ಅನುಮತಿ ಪಡೆದ ಪೌಲಸ್ ಮಂಗಳೂರು ರಿಜಿಸ್ಟ್ರಾರ್ ಆಫೀಸಿನಲ್ಲಿ ಮದುವೆ ಮಾಡಿಕೊಟ್ಟರು. ಗಂಡ-ಹೆಂಡತಿ ಇಬ್ಬರೂ ಈಗ ಆಶ್ರಮದ ಸೇವೆಯಲ್ಲಿ ಭಾಗಿ. ನಮಿತಾ ಈಗ ತುಂಬಿದ ಬಸುರಿ, ಹೆರಿಗೆಗೆಂದು ತವರಿಗೆ ಹೋಗಿದ್ದಾಳೆ.

ಹೀಗೆ ಸಿಯೋನಾಶ್ರಮದಲ್ಲಿ ತಮಗೆ ದ್ರೋಹ ಬಗೆದ ವಿಧಿಯೆದುರೇ ಸಡ್ಡು ಹೊಡೆದು ಜೀವನ್ಮುಖಿಯಾಗುವ ನೂರಾರು ಜೀವಗಳ ಚಿತ್ರವಿದೆ. ಹಾಗೆಯೇ ತಪ್ಪಿ ಹೋದ ಬದುಕಿನ ತಾಳ ಇನ್ನೆಂದಿಗೂ ಸರಿ ಹೋಗಲಾರದೇನೋ ಎಂಬಂತಹ ನಿರಾಶದಾಯಕ ಚಿತ್ರಗಳೂ ಇವೆ. ಎಲ್ಲೆಂದರಲ್ಲಿ ಮಲ ಮೂತ್ರ ಮಾಡುವವರು, ಊಟವೇ ಬೇಡವೆಂದು ರಚ್ಚೆ ಹಿಡಿಯುವವರು, ಅನ್ನವನ್ನು ಬಾಚಿ ಬಾಚಿ ಮುಕ್ಕುವವರು, ವಿನಾಃ ಕಾರಣ ನಗುವವರು, ಅರಚುವವರು. ಆಂಧ್ರ ಪ್ರದೇಶದ ಕಡೆಯ ಹೆಸರಿಲ್ಲದ ಅಜ್ಜಿಯೊಬ್ಬಳಿದ್ದಾಳೆ. ಸದಾ ಕೊಳಕಾಗಿರಬೇಕೆನ್ನುವುದೇ ಆಕೆಯ ಹವ್ಯಾಸ. ಸ್ನಾನ ಮಾಡಿಸಿದ, ಒಗೆದ ಬಟ್ಟೆ ಹಾಕಿಸಿದ ಮರುಕ್ಷಣವೇ ಮಣ್ಣಲ್ಲಿ ಹೊರಳಾಡಿ ಎಲ್ಲವನ್ನು ಗಲೀಜು ಮಾಡಿಕೊಳ್ಳುವಳು. ಅನ್ನಕ್ಕೆ ಕಲ್ಲು ಮಣ್ಣು ಬೆರೆಸಿ ತಿನ್ನುವಳು. ಇನ್ನೊಬ್ಬ ಅನ್ನಕ್ಕೆ ಉಚ್ಚೆಯನ್ನೇ ಹೊಯ್ದು ತಿನ್ನುವವನು. ಆದರೆ ಪೌಲೋಸ್ ದಂಪತಿಗಳ ಸಹನೆ ದೊಡ್ಡದು. ಆ ಸೀಮಾತೀತ ಸಹನೆಯ ಮುಂದೆ ಮನೋರೋಗಿಗಳ ವಿಕೃತಿ ಗೆಲ್ಲುವುದು ವಿರಳ.

ಈ ಕಡೆಯ ಬಹುತೇಕ ಮಲಿಯಾಳಿ ಕ್ರೈಸ್ತರಂತೆ ಯು.ಸಿ.ಪೌಲೋಸರ ಪೂರ್ವಜರೂ ಕೇರಳದಿಂದ ವಲಸೆ ಬಂದವರು. ಪೌಲೋಸರ ಹೆತ್ತವರು ಗಂಡಿಬಾಗಿಲು ಎಂಬಲ್ಲಿ ನೆಲೆಯೂರಿ ಕಾಡು ಕಡಿದು ಹತ್ತಿಪ್ಪತ್ತು ಎಕರೆ ಭೂಮಿಯನ್ನು ಕೃಷಿಯೋಗ್ಯ ಮಾಡಿದ್ದರು. ಬಳಿಕ ಈ ತೋಟವನ್ನೇ ನೆಚ್ಚಿಕೊಂಡು ಕುಟುಂಬ ಪೋಷಣೆ ಮಾಡುತ್ತಿದ್ದ ಪೌಲೋಸ್‌ಗೆ ಸಿಯೋನದಂತಹ ಆಶ್ರಮ ಮಾಡಬೇಕೆಂದು ಉಂಟಾದ ಪ್ರೇರಣೆ ಆಕಸ್ಮಿಕವಾದುದು.

ಮೂರೂವರೆ ವರ್ಷಗಳ ಹಿಂದೆ ಕೆಲಸ ನಿಮಿತ್ತ ಪಾಲಕ್ಕಾಡ್‌ಗೆ ಹೋಗಿದ್ದ ಪೌಲೋಸ್ ಪಾಲಕ್ಕಾಡ್ ರೈಲ್ವೇ ನಿಲ್ದಾಣದಲ್ಲಿ ರೈಲು ಕಾಯುತ್ತಿದ್ದರು. ಆಗ ಅಲ್ಲಿದ್ದ ಹೋಟೇಲೊಂದರ ಮಾಣಿ ಎಂಜಲು ಎಲೆಗಳನ್ನು ಡಸ್ಟ್‌ಬಿನ್‌ಗೆ ತಂದು ಸುರಿದನು. ಒಮ್ಮೆಲೇ ಅದೆಲ್ಲಿದ್ದರೋ ಏಳೆಂಟು ಜನ ಹುಚ್ಚರ ದಂಡು ಡಸ್ಟ್‌ಬಿನ್‌ಗೆ ಮುಗಿ ಬಿದ್ದು ಎಂಜಲೆಲೆಯ ಕೊಳೆತ ವಸ್ತುವಿಗಾಗಿ ಕಿತ್ತಾಡತೊಡಗಿದರು. ಈ ಯಾತನಾಮಯ ದೃಶ್ಯವನ್ನು ಕಂಡು ತಲ್ಲಣಿಸಿ ಹೋದ ಪೌಲೋಸ್ ವೇದನೆಯಿಂದ ಮುಖ ಕಿವುಚಿಕೊಂಡರು. ಅಲ್ಲಿಂದ ಊರಿಗೆ ಮರಳಿದರೂ ಆ ದೃಶ್ಯ ಮಾತ್ರ ಪೌಲೋಸರ ಮನಸ್ಸಿನಿಂದ ಮರೆಯಾಗಲಿಲ್ಲ. ಕೊನೆಗೆ ಅಂಥವರಿಗಾಗಿ ಆಶ್ರಮವೊಂದನ್ನು ತೆರೆಯುವ ತನ್ನ ಯೋಜನೆಯೊಂದನ್ನು ಪತ್ನಿ ಮೇರಿಯಲ್ಲಿ ಹೇಳಿಕೊಂಡರು. ಪೌಲೋಸರ ಪತ್ನಿಗೂ ಇದು ಸಮ್ಮತವೆಂದು ತೋಚಿತು. ಪೌಲೋಸ್ ದಂಪತಿಗಳ ಓದುತ್ತಿದ್ದ ಮಕ್ಕಳಾದ ಶೋಭಾ, ಸುಭಾಷ್, ಸೌಮ್ಯ, ಶೈನಿಯವರು ಕೂಡ ಹೆತ್ತವರ ನಿರ್ಧಾರವನ್ನು ವಿರೋಧಿಸಲಿಲ್ಲ.

ತನ್ನ ಆಶ್ರಮದ ಆರಂಭದ ಹೆಜ್ಜೆಯಾಗಿ ಪೌಲೋಸ್, ಕಳಸ ಕಡೆಯ ಯಶೋಧ ಎಂಬ ಅನಾಥ ಯುವತಿಯನ್ನು ತನ್ನ ಮನೆಯಲ್ಲಿಟ್ಟು ಸಾಕತೊಡಗಿದರು. ಈ ಯಶೋಧ ಪೋಲೀಯೋದಿಂದ ಸೊಂಟದ ಕೆಳಗಿನ ಭಾಗವನ್ನೇ ಕಳೆದುಕೊಂಡಿದ್ದಳು ಬೇರೆ. ಎರಡನೆಯ ಸದಸ್ಯರಾಗಿ ಕಕ್ಕಿಂಜೆಯಲ್ಲಿ ಅನಾಥರಾಗಿ ಬಿದ್ದುಕೊಂಡಿದ್ದ ಕರಿಯ ಶೆಟ್ಟರ ಸೇರ್ಪಡೆಯಾಯಿತು. ಹುಚ್ಚ ರಾಮ ಸಿಯೋನಾಶ್ರಮಕ್ಕೆ ಕಾಲಿಟ್ಟ ಮೂರನೆಯ ಸದಸ್ಯ. ಹೀಗೆ ದಿನೇ ದಿನೇ ಸಿಯೋನಾಶ್ರಮದ ಸದಸ್ಯರ ಸಂಖ್ಯೆ ಏರ ತೊಡಗಿತು. ಪುಕ್ಕಟೆ ಸಾಕುತ್ತಾರೆಂದ ತಕ್ಷಣ ತರಕಾರಿಯನ್ನು ಎಸೆದು ಹೋದಂತೆ ಮನುಷ್ಯರನ್ನು ಎಸೆದು ಹೋಗುವವರಿಗೂ ಕಡಿಮೆಯಿರಲಿಲ್ಲ. ಹಾಗೆ ಬಿಟ್ಟು ಹೋದ ಬಂಧುಗಳನ್ನು ಮತ್ತೆ ಆಶ್ರಮದ ಪರಿಸರದಲ್ಲಿ ಕಂಡವರೂ ಇಲ್ಲ.

ಈಗ ಆಶ್ರಮದಲ್ಲಿ ಪುರುಷರೂ, ಮಹಿಳೆಯರೂ ಸೇರಿ 162 ಮಂದಿ ಇದ್ದಾರೆ. ಹಿಂದೆ ಇದ್ದ ಸೋಗೆ ಮಾಡಿನ ಕಟ್ಟಡ ಹೋಗಿ ಈಗ ಕಾಂಕ್ರಿಟ್ ಕಟ್ಟಡ ನಿರ್ಮಾಣವಾಗಿದೆ. ಅಕ್ಕಿ, ಬಟ್ಟೆ, ಔಷಧಿ ಎಂದು ತಿಂಗಳಿಗೆ ಲಕ್ಷಾಂತರ ರೂಪಾಯಿ ಖರ್ಚು ಬೀಳುತ್ತಿದೆ. ಎಲ್ಲವೂ ದಾನಿಗಳ ಕೃಪೆಯಿಂದ ನಡೆದಿದೆ ಎಂದು ಸ್ಮರಿಸಿಕೊಳ್ಳಲು ಪೌಲೋಸ್ ಮರೆಯುವುದಿಲ್ಲ. ಸರಕಾರವೇನಾದರೂ ಸಹಾಯ ಮಾಡಿದರೆ ಇನ್ನೂ ವ್ಯವಸ್ಥಿತವಾಗಿ ಆಶ್ರಮವನ್ನು ನಡೆಸಬಹುದೆಂದು ಪೌಲೋಸ್ ನುಡಿಯುತ್ತಾರೆ.

ಈ ನಡುವೆ ಏರ್ವಾಡಿ ದುರಂತದಲ್ಲಿ 26 ಜನ ಸಜೀವ ದಹನಗೊಂಡ ಬಳಿಕ ಸುಪ್ರೀಂಕೋರ್ಟ್ ಇಂತಹ ಆಶ್ರಮಗಳಲ್ಲಿ ಹುಚ್ಚರನ್ನು ಸಾಕುವುದಕ್ಕೆ ಕಟ್ಟು ನಿಟ್ಟಾದ ನಿಯಮಗಳನ್ನು ಹೇರಿವೆ. ಹಾಗಾಗಿ ಇಲ್ಲಿದ್ದ 43 ಜನ ಹುಚ್ಚರನ್ನು ಈಗ ಮಂಗಳೂರಿನ ವಿವಿಧ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಸದ್ಯಕ್ಕೆ ಪೌಲೋಸರು ತನ್ನ ಆಶ್ರಮಕ್ಕೆ ಹುಚ್ಚರನ್ನು ಸೇರಿಸಿಕೊಳ್ಳುವಂತಿಲ್ಲ. ಸುಪ್ರೀಂಕೋರ್ಟ್ ಆಗ್ರಹಿಸುವ ಸವಲತ್ತುಗಳನ್ನು ಯಾರಾದರೂ ತನಗೆ ಒದಗಿಸಿಕೊಟ್ಟಲ್ಲಿ ತಾನು ಮತಿ ವಿಕಲರನ್ನು ಸಾಕಿಕೊಳ್ಳಲು ಸಿದ್ಧನಿದ್ದೇನೆ ಎಂದು ಪೌಲೋಸ್ ಮಾಧ್ಯಮಗಳಿಗೆ ತಿಳಿಸುತ್ತಾರೆ. ಪೌಲೋಸ್ ದಂಪತಿಗಳದ್ದು ನಿರ್ಗತಿಕರ ಸೇವೆಯಲ್ಲಿ ದಣಿವು ಕಾಣದ ಜೀವ. ಪೌಲೋಸರ ನಾಲ್ವರು ಮಕ್ಕಳು ಕೂಡ ಬಿಡುವಿನ ವೇಳೆಯಲ್ಲಿ ಆಶ್ರಮದ ಸೇವೆಯಲ್ಲಿ ಕಾಲ ಕಳೆಯುತ್ತಾರೆ. ಪೌಲೋಸರ ಅನೇಕ ಬಂಧುಗಳು ಕೂಡ ಪ್ರತಿಫಲಾಪೇಕ್ಷೆಯಿಲ್ಲದೆ ಸೇವೆಯಲ್ಲಿ ತಲ್ಲೀನರಾಗಿದ್ದಾರೆ.

ಪೌಲೋಸರ ಮಾನವೀಯ ಸೇವೆಯನ್ನು ಅನುಮಾನದ ಕಣ್ಣುಗಳಿಂದ ಕಾಣುವ ವಿಕೃತರಿಗೂ ಸುತ್ತಮುತ್ತಲ ಪರಿಸರದಲ್ಲಿ ಬರವಿಲ್ಲ, ಸೇವೆಯ ಹೆಸರಿನಲ್ಲಿ ಅದೆಂಥದೋ ಲಾಭ ಗಳಿಸುತ್ತಿದ್ದಾರೆ ಎನ್ನುವುದು ಜನರ ಗುಮಾನಿ. ಆ ಲಾಭದ ಸ್ವರೂಪವೇಂತಹದೆನ್ನುವುದು ಈ ಜನರಿಗೆ ಸ್ಪಷ್ಟವಿಲ್ಲ. ಆಶ್ರಮದ ಹೆಸರಿನಲ್ಲಿ ಅದೆಲ್ಲಿಂದಲೋ ಹಣ ಹರಿದು ಬರುತ್ತದೆನ್ನುವುದು ಕೆಲವರ ಶಂಕೆ. 'ಹಣ ಸಿಕ್ಕರೆ ಕಂಡವರ ವ್ರಣ ತೊಳೆಯಲು ನೀನು ಸಿದ್ಧನಿರುವೆಯಾ?' ಎಂದು ಶಂಕಿಸಿದವನಲ್ಲಿ ಕೇಳಿದರೆ ಮಾರುತ್ತರ ಬರುವುದಿಲ್ಲ. ಇನ್ನು ಕೆಲವರದ್ದು ಪೌಲೋಸ್ ಸೇವೆಯ ಹೆಸರಲ್ಲಿ ಮತಾಂತರ ಮಾಡುತ್ತಾನೆ ಎನ್ನುವ ಆರೋಪ. ಬೀದಿ ಬದಿಯಲ್ಲಿ ಕೊಳೆತು ನಾರುವ ಮಾಂಸದ ಮುದ್ದೆಗಳನ್ನು ಶುದ್ಧೀಕರಿಸಿ ಮಾನವ ರೂಪಕ್ಕೆ ತರುವ ಪೌಲೋಸ್, ಒಂದು ವೇಳೆ ಅಂಥವರನ್ನು ಮತಾಂತರಗೊಳಿಸಿದರೆ ಅದರಲ್ಲಿ ತಪ್ಪೇನಿದೆ? ಹಾಗೆಂದು ಪೌಲೋಸ್ ಮತಾಂತರಗೊಳಿಸಿದ್ದಕ್ಕೆ ಯಾವ ನಿದರ್ಶನಗಳೂ ಇಲ್ಲ. ಲಾಭವಿಲ್ಲದೇ ಯಾರೂ ಯಾವುದನ್ನೂ ಮಾಡುವುದಿಲ್ಲ ಎಂಬ ವಿಕೃತಿಯನ್ನೇ ಜೀವನ ಮೌಲ್ಯವನ್ನಾಗಿ ಸ್ವೀಕರಿಸಿಕೊಂಡ ಮನುಷ್ಯ ಇನ್ನೊಬ್ಬನಲ್ಲಿರುವ ಒಳಿತನ್ನು ಗುರುತಿಸಿಕೊಳ್ಳುವುದು ಎಂದಾದರೂ ಸಾಧ್ಯವಿದೆಯೇ?

ಸಿಯೋನಾಶ್ರಮದ ವಿಳಾಸ:
ಯು.ಸಿ.ಪೌಲೋಸ್, ಸಿಯೋನ ಆಶ್ರಮ,
ಗಂಡಿಬಾಗಿಲು ಅಂಚೆ-574228
ಬೆಳ್ತಂಗಡಿ ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ

(ದಿ. ಬಿ.ಎಂ. ರಶೀದ್ 2001ರಲ್ಲಿ ಲಂಕೇಶ್ ಪತ್ರಿಕೆಯಲ್ಲಿ ಬರೆದ ಲೇಖನ)

Testimony of Hegdeji

"The world is beautiful but sometimes it can be miserable. When nature is unkind to individual and if luck terns its back suffering can be unbearable. To attend to the unlucky and unfortunate tremendous will power and dedication is required. This Ashram is unique in serving the socially boycotted and forgotten souls. All praise for the service rendered here. May Sri Manjunatha Swamy bless all the inmates and those blessed souls serving here.

Dr. D. Veerendra HegdeDharmasthala
(on his visit to ashram on 16-01-2008)

ರಂಗನ ಪಲ್ಕೆಯೆಂಬ ಹಳ್ಳಿಯಲ್ಲಿ ಜ್ಞಾನದ ಕಂಪು ಬೀರುವ ಲಿಟ್ಲ್‌ಪವರ್ ಸ್ಕೂಲ್!

LITTLE FLOWER SCHOOL

ಯಾವುದೇ ಫಲಾಪೇಕ್ಷೆಯಿಲ್ಲದೆ, ದಿಕ್ಕಿಲ್ಲದ, ಭೂಮಿಗೆ ಭಾರವೆನಿಸಿದ ವರ ಸೇವೆಯೇ ದೇವರ ಸೇವೆ ಎನ್ನುತ್ತಾ ಬೆಳ್ತಂಗಡಿಯ ತೀರಾ ಕುಗ್ರಾಮ ಗಂಡಿಬಾಗಿಲಿನಲ್ಲಿ 'ಸಿಯೋನ್' ಹೆಸರಿನ ದೀನ, ದಲಿತರ ದೈವ ಸಾಮ್ರಾಜ್ಯವನ್ನು ನಡೆಸುತ್ತಾ ನೂರಾರು ನೊಂದ ಜೀವಗಳಿಗೆ ಆಸರೆಯಾದ ಯು.ಸಿ. ಪೌಲೋಸ್‌ರವರ ಬಗ್ಗೆ ಸಾಕಷ್ಟು ಕೇಳಿದ್ದೇವೆ.

ತಾನೊಂದು ಚಪ್ಪರ ಹಾಕಿ ಆರಂಭಿಸಿದ ಆಶ್ರಮ ಪ್ರಚಾರ-ಪ್ರಶಂಸೆಗಳ ನಡುವೆ ಬೆಳೆಯುತ್ತಾ ಮನೋರೋಗಿಗಳ ಸಾಂತ್ವನ ಕೇಂದ್ರವಾಗಿ ರೂಪುಗೊಂಡದ್ದೇ ಖರ್ಚು ಬೆಳೆಯುತ್ತಾ ಹೋಯಿತು. ಹೀಗೆ ಯಾವುದೇ ಅನುದಾನ ಫಾರಿನ್ ಫಂಡುಗಳ ಹಂಗಿಲ್ಲದೇ, ಕಾಡಿ ಬೇಡಿ-ದೇವರ ಮೇಲೆ ಭಾರ ಅನಾಥಾಶ್ರಮ ಹಾಕಿ ಮುನ್ನಡೆಸುತ್ತಿದ್ದ ಪೌಲೋಸರು, ಹೆಚ್ಚಿನ ಹಣಕ್ಕಾಗಿ ದಾನಿಗಳನ್ನು ಹುಡುಕುತ್ತಾ ವರ್ಷಕ್ಕೊಮ್ಮೆ ಫಾರಿನ್ ಟೂರ್ ಹೋಗುತ್ತಿದ್ದರು. ಆದರೆ ಹೀಗೆ ಹೋಗಿರಬೇಕಾದರೆ ಆ ಒಂದು ವರ್ಷ ಅವರಿಗೆ ಜಾಗತಿಕ ಮುಗ್ಗಟ್ಟಿನ ಫಲವಾಗಿ ಸಾಕಷ್ಟು ಕಾಣಿಕೆ ಸಿಗಲಿಲ್ಲ. ಹಾಗಂತ ಬೇಸರಿಸದೆ ಸಿಕ್ಕಷ್ಟನ್ನು ಪಡೆದು, ಈ ಬಾರಿ ದೇವರ ಆಜ್ಞೆ ಬೇರೇನೋ ಇರಬೇಕೆಂದು ಮನಸ್ಸಲ್ಲೇ ದೇವರ ಮೇಲೆ ಭಾರ ಹಾಕಿ ವಾಪಾಸಾದಾಗ ಅಚ್ಚರಿಯೊಂದು ಕಾದಿತ್ತು. ಪೌಲೋಸರ ಸೇವಾ ಕಾರ್ಯವನ್ನು ಕೇಳಿ ತಿಳಿದ ಕುವೈಟ್‌ನಲ್ಲಿ ಕೆಲಸದಲ್ಲಿರುವ ಕಾರ್ಕಳದ ವ್ಯಕ್ತಿಯೋರ್ವ ಸಿಯೋನಾಶ್ರಮಕ್ಕೆ ಭೇಟಿ ಕೊಟ್ಟವರೇ ಅಲ್ಲಿನ ನಿರ್ಭಾಗ್ಯರು, ಅನಾಥ ಮಕ್ಕಳು ಅವರ ಕತ್ತಲ ಭವಿಷ್ಯವನ್ನು ಕಂಡು ಮರುಗಿ ಮರು ಯೋಚಿಸದೇ... ತಾನು ಕಾರ್ಕಳದ ಕೌಡೂರು ಗ್ರಾಮದ ರಂಗನ ಪಲ್ಕೆಯಲ್ಲಿ ತನ್ನ ಹುಟ್ಟೂರಿನ ಮೇಲಿನ ಪ್ರೀತಿಯಿಂದ ಶುರುವಿಟ್ಟಿದ್ದ ಲಿಟ್ಲ್‌ಫ್ಲವರ್ ಇಂಗ್ಲೀಷ್ ಮೀಡಿಯಂ ಸ್ಕೂಲ್ ಅನ್ನು ಪೌಲೋಸ್‌ರಿಗೆ ದಾನವಾಗಿ ಬಿಟ್ಟುಕೊಡಲು ಮುಂದೆ ಬಂದರು. ಪೌಲೋಸ್‌ರ ಪಾಲಿಗೆ ಆ ವರ್ಷ ದೇವರು ಈ ದಾನಿಯ ರೂಪದಲ್ಲಿ ಕಾಣಿಸಿಕೊಂಡಿದ್ದ. ಯಾವುದೇ ಷರತ್ತುಗಳಿಲ್ಲದೇ, ಪ್ರಚಾರದ ಹಂಗಿಲ್ಲದೇ ತನ್ನ ಆಸ್ತಿಯಲ್ಲಿ 14 ಎಕರೆ ಭೂಮಿ ಮತ್ತು 'ಗ್ಲಾರಿಡಾ' ಎಜ್ಯುಕೇಶನ್ ಟ್ರಸ್ಟ್ ಅನ್ನು ಪುಕ್ಕಟ್ಟೆಯಾಗಿ ಕೊಟ್ಟು ಪುಣ್ಯ ಕಟ್ಟಿಕೊಂಡ ಆ ಮಹಾನುಭಾವರ ಹೆಸರು ಲಾರೆನ್ಸ್ ಸಲ್ಡಾನ್ನ!

ತನ್ನನ್ನು ತಾನು ಕಷ್ಟಕ್ಕೆ ತೀಡಿಕೊಳ್ಳುವುದರಲ್ಲೇ ಸಂತೃಪ್ತಿ ಕಾಣುವ ಯು.ಪಿ. ಪೌಲೋಸ್‌ರು ಹಿಡಿದ ಕೆಲಸ ಮುಗಿಯುವವರೆಗೆ ವಿರಮಿಸದ ಹಠಮಾರಿ. ಅದಕ್ಕಾಗಿ ನಿದ್ರೆ-ಆಹಾರಗಳನ್ನು ಬಿಟ್ಟು ಓಡಾಡುವವರು. ಅವರ ಈ ಕೃತ ಶಕ್ತಿಯ ಫಲವಾಗಿಯೋ ರಂಗನ ಪಲ್ಕೆಯಲ್ಲಿ L.K.G.ಯಿಂದ 7ನೇ ತರಗತಿ ತನಕವಷ್ಟೇ ಇದ್ದ ಲಿಟ್ಲ್ ಫ್ಲವರ್ ಸ್ಕೂಲ್ ಹೈಸ್ಕೂಲ್ ಒಂದೇ ವರ್ಷದಲ್ಲಿ ಆಗಿ ಅರಳತೊಡಗಿದೆ. ಕಳೆದ ವರ್ಷ 90 ವಿದ್ಯಾರ್ಥಿಗಳಿದ್ದಲ್ಲಿ ಈ ಸಾಲಿನಲ್ಲಿ 204ಕ್ಕೆ ಏರಿದೆ. ಯಾವುದೇ ಲಾಭ ಮಾಡುವ ಉದ್ದೇಶವಿಲ್ಲದೆ ಕೆರೆಯ ನೀರನ್ನು ಕೆರೆಗೆ ಎನ್ನುವ ಪಾಲಿಸಿಯಲ್ಲಿ ಸಾಗುವ ಪೌಲೋಸ್ ಈ ವರ್ಷ 8ನೇ ತರಗತಿಗೆ ಸೇರ್ಪಡೆಗೊಂಡ ಎಲ್ಲಾ ವಿದ್ಯಾರ್ಥಿಗಳಿಗೆ 3 ವರ್ಷದ ಉಚಿತ ವಿದ್ಯಾಭ್ಯಾಸವನ್ನು ಕಲ್ಪಿಸಿದ್ದಾರೆ. ತನ್ನ ಸಿಯೋನಾಶ್ರಮದಲ್ಲಿ ಹುಟ್ಟಿ ಬೆಳೆದ, ಅನಾಥ ದಿಕ್ಕಿಲ್ಲದ, 42 ಮಕ್ಕಳು, ಲಿಟ್ಲ್‌ಫ್ಲವರ್ ಸ್ಕೂಲ್‌ನಲ್ಲಿ ಉಚಿತ ಹಾಸ್ಟೆಲ್ ಪಡೆದು ಯಾವುದಕ್ಕೂ ಕಮ್ಮಿ ಇಲ್ಲದಂತೆ ಕಲಿಯುತ್ತಾ ಬೆಳೆಯುತ್ತಿದ್ದಾರೆ. ಆಟ-ಪಾಠಗಳಲ್ಲೂ ಮುಂಚೂಣಿಯಲ್ಲಿದ್ದಾರೆ. ಈ ಮಕ್ಕಳು ಅಪ್ಪ ಎಂದು ಕರೆದು ಅಪ್ಪಿ ಹಿಡಿದಾಗ ಸಿಗುವ ಸಂತೃಪ್ತಿ ಬೇರೆಲ್ಲಿದೆ ಎನ್ನುವ ಪೌಲೋಸ್ ದಿನದ 24 ಗಂಟೆಯೂ ಈ ಹಾಸ್ಟೆಲ್‌ನಲ್ಲಿನ ಅನಾಥ ಮಕ್ಕಳಾದ ಶ್ಯಾಮ, ದೀಪಕ್, ಮಾಧವ, ಶ್ರೇಯಸ್ಸರನ್ನು ಸ್ವಂತ ಮಕ್ಕಳಂತೆ ನೋಡಿಕೊಳ್ಳುತ್ತಾ ಇರೋದನ್ನು ನೋಡಿದರೆ ಅನಾಥ ಎಂಬ ಶಬ್ದದ ಅರ್ಥವೇ ಕಳೆದುಕೊಂಡಂತೆ ಭಾಸವಾಗುತ್ತದೆ.

ಲಾರೆನ್ಸ್ ಸಲ್ಡಾನ್ನ

ತನಗೆ ದಾನವಾಗಿ ಕೊಟ್ಟ 14 ಎಕರೆಯಷ್ಟು ಗುಡ್ಡಗಾಡು ಪ್ರದೇಶವನ್ನು ಮಟ್ಟಸ ಮಾಡಿ ಒಂದು ಭಾಗದಲ್ಲಿ ಬಾಳೆತೋಟ ಮಾಡಿರುವ ಪೌಲೋಸ್‌ರು ಇನ್ನೊಂದು ಭಾಗದಲ್ಲಿ ವ್ಯವಸ್ಥಿತವಾದ ಶಾಲಾ ಕಟ್ಟಡಕ್ಕೆ ಅಡಿಪಾಯ ಹಾಕಿ ಮುಂದಿನ ಯೋಜನೆಗಳತ್ತ ಕಣ್ಣು ಹಾಕಿದ್ದಾರೆ. ಪಾಠದಷ್ಟೇ ಆಟಕ್ಕೂ ಆದ್ಯತೆ ಕೊಟ್ಟು 'ಸಂತಸ ಕಲಿಕೆ'ಯ ಥಿಯರಿ ಮೂಲಕ ಮಕ್ಕಳ ಸಮಗ್ರ ಬೆಳವಣಿಗೆಗೆ ಪೂರಕವಾದ ಶಿಕ್ಷಣಕ್ಕೆ ಒತ್ತುಕೊಡುವ ಲಿಟ್ಲ್ ಫ್ಲವರ್ ಹೈಸ್ಕೂಲ್‌ನಲ್ಲಿ ಪೌಲೋಸರ ಕನಸನ್ನು ನನಸು ಮಾಡಬಲ್ಲ ಉತ್ಸಾಹಿ ಶಿಕ್ಷಕ ಸಮೂಹ ಹಗಲಿಗೆ ಹಗಲು ಕೊಟ್ಟು ಶ್ರಮಿಸುತ್ತಿದ್ದಾರೆ.

ರಂಗನ ಪಲ್ಕೆಯಂತಹ ಕುಗ್ರಾಮದಲ್ಲಿ ನಗರದ ಶಾಲೆಗಳಿಗೆ ಯಾವುದರಲ್ಲೂ ಕಮ್ಮಿಯಿಲ್ಲದಂತೆ ಶಿಕ್ಷಣ ಮತ್ತು ಇತರೇ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ನಮ್ಮ ಮಕ್ಕಳು ಹಿಂದಿಲ್ಲವೆನ್ನುವುದನ್ನು ತೋರಿಸಿ ಕೊಡುವುದೇ ನಮ್ಮ ಗುರಿ ಎನ್ನು ಲಿಟ್ಲ್‌ಫ್ಲವರ್. ಮುಖ್ಯ ಉಪಾಧ್ಯಾಯಿನಿಯವರ ಛಲಭರಿತ ಮಾತಿನ ಫಲಿತಾಂಶವನ್ನು ಮುಂದಿನ ದಿನಗಳಲ್ಲಿ ನಿರೀಕ್ಷಿಸೋಣ. ●

ಹೈಸ್ಕೂಲ್‌ಗೆ ಭಡ್ತಿ ಪಡೆದ ಸಮಾರಂಭ

ಸಿಯೋನ್ ಸ್ನೇಹ ಸ್ವ–ಸಹಾಯ ಸಂಘದ ವತಿಯಿಂದ ಸ್ಥಳೀಯ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕ ವಿತರಣೆ ಸಂದರ್ಭ